# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

## ದಿನಾಂಕ:04-08-2015ರಂದು ಬೆಳಗ್ಗೆ 11.00 ಗಂಟೆಗೆ ಸನ್ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ 63ನೇ ಆಡಳಿತ ಮಂಡಳ ಸಭೆಯ ನಡವಳಿ:-

*****

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಶ್ರೀ.ಹೆಚ್. ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಇಲಾಖೆಗಳ ಸಚಿವರು<br>ಹಾಗೂ ಅಧ್ಯಕ್ಷರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು. | ಅಧ್ಯಕ್ಷರು |
| 2. | ಶ್ರೀಮತಿ.ಶಾಲಿನಿ ರಜನೀಶ್, ಐ.ಎ.ಎಸ್.<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು |
| 3. | ಶ್ರೀ.ಗಂಗಾರಾಮ್ ಬಡೇರಿಯಾ ಐ.ಎ.ಎಸ್<br>ಸರ್ಕಾರದ ಕಾರ್ಯದರ್ಶಿ,ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 4. | ಶ್ರೀ.ರಿತೇಶ್ ಕುಮಾರ್ ಸಿಂಗ್ ಐ.ಎ.ಎಸ್.,<br>ಸರ್ಕಾರದ ಕಾರ್ಯದರ್ಶಿ,ಆರ್ಥಿಕ ಇಲಾಖೆ(ವೆಚ್ಚ), ಬೆಂಗಳೂರು | ಸದಸ್ಯರು |
| 5. | ಶ್ರೀಮತಿ. ಎಂ.ವಿ.ಸಾವಿತ್ರಿ , ಐ.ಎ.ಎಸ್.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 6. | ಶ್ರೀ.ಎಂ.ಆರ್.ಹಿರೇಮಠ್ ಕೆ.ಎ.ಎಸ್.,<br>ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, | ಸದಸ್ಯ ಕಾರ್ಯದರ್ಶಿ |
| | **ಸದಸ್ಯರ ಬದಲಿಗೆ ಹಾಜರಾದವರು** | |
| 1 | ಶ್ರೀ.ವಿ.ಕೆ.ನಾಗರಾಜ್<br>ಜಂಟಿ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 2. | ಶ್ರೀ.ನಜೀಬುಲ್ಲಾ ಖಾನ್<br>ಉಪ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಪ್ರತಿನಿಧಿ |
| 3. | ಶ್ರೀ.ಅಲ್ಮಾಸ್ ಪರ್ವಿನ್<br>ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| | **ಗೈರು ಹಾಜರಾದ ಸದಸ್ಯರು** | |
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಗೈರು ಹಾಜರಿ |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ) | ಗೈರು ಹಾಜರಿ |
| 3 | ಸರ್ಕಾರದ ಕಾರ್ಯದರ್ಶಿ<br>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಗೈರು ಹಾಜರಿ |
| 4. | ಆಯುಕ್ತರು.<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಗೈರು ಹಾಜರಿ |
| 5. | ನಿರ್ದೇಶಕರು<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಗೈರು ಹಾಜರಿ |
| 6. | ನಿರ್ದೇಶಕರು<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು | ಗೈರು ಹಾಜರಿ |

ಸದಸ್ಯ ಕಾರ್ಯದರ್ಶಿ                                        ಅಧ್ಯಕ್ಷರು

ಕಾರ್ಯನಿರ್ವಾಹಕ ನಿರ್ದೇಶಕರು, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಿಗೆ, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರುಗಳಿಗೆ ಇಲಾಖಾ ಮುಖ್ಯಸ್ಥರುಗಳಿಗೆ ಮತ್ತು ಸದಸ್ಯರುಗಳಿಗೆ ಹಾರ್ಥಿಕ ಸ್ವಾಗತವನ್ನು ಬಯಸಿದರು. ಕಾರ್ಯನಿರ್ವಾಹಕ ನಿರ್ದೇಶಕರು, ಮಾನ್ಯ ಸಚಿವರನ್ನು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿ, ಸಭೆಯನ್ನು ನೆಡೆಸಿಕೊಡುವಂತೆ ಕೋರಿದರು.

**ವಿಷಯ ಸಂಖ್ಯೆ: 1**

**ದಿನಾಂಕ:13-04-2015 ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ**

ದಿನಾಂಕ:13-04-2015ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವುದು.

**ತೀರ್ಮಾನ:**

**ದಿನಾಂಕ:13-04-2015ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಿತು.**

**ವಿಷಯ ಸಂಖ್ಯೆ: 2**

**ದಿನಾಂಕ:13-04-2015 ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮ:**

ದಿನಾಂಕ:13-04-2015 ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧದಲ್ಲಿ ವಿವರಿಸಿ ಆಡಳಿತ ಮಂಡಳಿ ಅನುಮೋದನೆ ಕೋರಿದೆ.

**ತೀರ್ಮಾನ:**

**ದಿನಾಂಕ:13-04-2015 ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ಅನುಪಾಲನ ವರದಿಯನ್ನು ಪರಿಶೀಲಿಸಿ, ಅನುಮೋದಿಸಿತು.**

ದಿನಾಂಕ:13-04-2015 ರಂದು ನಡೆದ 62ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ಅನುಪಾಲನ ವರದಿಯನ್ನು ಪರಿಶೀಲಿಸಿ ಅನುಮೋದಿಸಿದ ನಂತರ 62ನೇ ಆಡಳಿತ ಮಂಡಳಿ ಸಭೆಯಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದವತಿಯಿಂದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಹಾಸಿಗೆ ಮತ್ತು ದಿಂಬುಗಳನ್ನು ಖರೀದಿಸಿರುವ ಸಂಬಂಧ ವಿಷಯವನ್ನು ಕೈಗೆತ್ತಿಕೊಳ್ಳದೇ deferred ಎಂದು ನಮೂದಿಸಬೇಕಾಗಿತ್ತು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಂಘದ ಅಧ್ಯಕ್ಷರು. ಸೂಚಿಸಿದರು. ಸದರಿ ವಿಷಯದ ಬಗ್ಗೆ ಆಡಳಿತ ಮಂಡಳಿಯು ದೀರ್ಘವಾಗಿ ಚರ್ಚಿಸಿ,

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ 2014-15ನೇ ಸಾಲಿನಲ್ಲಿ ಕರ್ನಾಟಕ ತೆಂಗಿನನಾರಿನ ಅಭಿವೃದ್ಧಿ ನಿಗಮ ಸಂಸ್ಥೆಯಿಂದ ಪ್ರತಿ ಹಾಸಿಗೆಗೆ ರೂ.3726=75 ಗಳಂತೆ 121 ವಸತಿ ಶಾಲೆಗಳಿಗೆ 31220 ಹಾಸಿಗೆಗಳನ್ನು ಹಾಗೂ ಪ್ರತಿ ದಿಂಬಿಗೆ ರೂ.508/-ಗಳಂತೆ ಒಟ್ಟು 62 ವಸತಿ ಶಾಲೆಗಳಿಗೆ 15800 ದಿಂಬುಗಳನ್ನು ಒಟ್ಟು ರೂ.12,43,09,175 ಗಳ ವೆಚ್ಚದಲ್ಲಿ ಖರೀದಿಸಿದ್ದು, ಯಾವುದೇ ನಿಯಮಗಳು ಪಾಲನೆಯಾಗದೇ ಇರುವುದನ್ನು ಸಭೆಯು ಗಮನಿಸಿತು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕಾರ್ಯಾದೇಶ ನೀಡುವುದಕ್ಕೆ ಸಂಬಂಧಿಸಿದ ಮತ್ತು ಬಿಲ್ಲುಗಳನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿದ ಕಡತಗಳನ್ನು ಕಡ್ಡಾಯವಾಗಿ ಮಾನ್ಯ ಸಚಿವರ ಅವಗಾಹನೆಗೆ ತಂದು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು ನೀಡಿದ ದಿನಾಂಕ:30-07-2014 ರ ಟಿಪ್ಪಣಿಯನ್ನು ಪರಿಗಣಿಸದೇ ಹಾಸಿಗೆ ಮತ್ತು ದಿಂಬುಗಳ ಖರೀದಿಗೆ ಕಾರ್ಯಾದೇಶ ನೀಡಿ, ಈಗಾಗಲೇ ಕರ್ನಾಟಕ ರಾಜ್ಯ ತೆಂಗಿನನಾರಿನ ಅಭಿವೃದ್ಧಿ ನಿಗಮಕ್ಕೆ ರೂ.9,72,60,330/-ಗಳನ್ನು ಪಾವತಿಸಿರುವುದನ್ನು ಸಭೆಯು ತೀವ್ರವಾಗಿ ಆಕ್ಷೇಪಿಸಿತು. ಇನ್ನೂ ಪಾವತಿಸಬೇಕಾದ ರೂ.2,70,48,845/-ಗಳ ಬಾಕಿ ಮೊತ್ತವನ್ನು ಸಭೆಯು ಗಮನಿಸಿ, ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಸದರಿ ಖರೀದಿಯಲ್ಲಾದ ಈ ಕೆಳಗಿನ ನ್ಯೂನ್ಯತೆಗಳನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು.

1. ಹಿಂದಿನ ವರ್ಷಗಳಲ್ಲಿ ಪ್ರತಿ ಹಾಸಿಗೆಗೆ ಇರುವ ದರ ರೂ.1750/-ಗಳು ಹಾಗೂ ಪ್ರತಿ ದಿಂಬಿಗೆ ರೂ.196=00ಗಳ ದರಗಳನ್ನು ಕ್ರಮವಾಗಿ ರೂ.3726=75 ಹಾಗೂ ರೂ.503=00 ಗಳಿಗೆ ಏರಿಸಿ, ಸಂಘದ ಶಾಶ್ವತ ಖರೀದಿ ಸಮಿತಿ ಸಭೆಯಲ್ಲಾಗಲಿ ಅಥವಾ ಆಡಳಿತ ಮಂಡಳಿ ಸಭೆಯಲ್ಲಾಗಲಿ ಅನುಮೋದನೆ ಪಡೆಯದೇ ಖರೀದಿ ಮಾಡಿರುವುದನ್ನು ಆಡಳಿತ ಮಂಡಳಿ ಸಭೆಯು ತೀವ್ರವಾಗಿ ಆಕ್ಷೇಪಿಸಿತು. ಇದರಿಂದಾಗಿ ಸಂಘಕ್ಕೆ ರೂ.6,73,59,410/-ಗಳ ಆರ್ಥಿಕ ನಷ್ಟ ಉಂಟಾಗಿದ್ದು, ಈ ಖರೀದಿ ಕ್ರಮವು ಅವ್ಯವಹಾರದಿಂದ ಕೂಡಿದೆ ಎಂಬ ಸಂಶಯಕ್ಕೆ ಎಡೆ ಮಾಡಿಕೊಟ್ಟಿರುವುದನ್ನು ಸಭೆಯು ಗಮನಿಸಿತು.
2. ಖರೀದಿ ಸಂದರ್ಭದಲ್ಲಿ ಹಾಸಿಗೆ ಮತ್ತು ದಿಂಬುಗಳ ಬೇಡಿಕೆ ಪಟ್ಟಿ ಮತ್ತು ದರಪಟ್ಟಿಗಳು ಪರಿಶೀಲನೆಯಾಗದೇ ಬೇಡಿಕೆ ಸಂಖ್ಯೆ 18000 ಇದ್ದು, ಖರೀದಿಸಿದ ಸಾಮಗ್ರಿಗಳ ಸಂಖ್ಯೆ 31229 ಆಗಿದ್ದು, ಹೆಚ್ಚುವರಿಯಾಗಿ 13729 ಹಾಸಿಗೆ ಮತ್ತು ದಿಂಬುಗಳನ್ನು ಅತೀ ಹೆಚ್ಚಿನ ದರದಲ್ಲಿ ಖರೀದಿಸಿದ್ದರಿಂದ ಹೆಚ್ಚುವರಿಯಾಗಿ ರೂ. 3,09,91,104/- ಗಳ ವೆಚ್ಚ ಭರಿಸಲಾಗಿದ್ದು, ಹೀಗೆ ಒಟ್ಟಾರೆ ರೂ.9,83,50,514 ಗಳ ಆರ್ಥಿಕ ನಷ್ಟ ಉಂಟಾಗಿರುವುದನ್ನು ಗಮನಿಸಲಾಯಿತು.

3. ಕರ್ನಾಟಕ ರಾಜ್ಯ ತೆಂಗಿನನಾರಿನ ಅಭಿವೃದ್ಧಿ ನಿಗಮವು 2014-15ನೇ ಸಾಲಿನಲ್ಲಿ ಸರಬರಾಜು ಮಾಡಿದ ಹಾಸಿಗೆ ಮತ್ತು ದಿಂಬುಗಳನ್ನು ದಾಸ್ತಾನು ವಹಿಯಲ್ಲಿ **(Stock Register)** ನಮೂದಿಸದೇ ರೂ.9,72,60,330/-ಗಳ ಬಿಲ್ಲುಗಳನ್ನು ಪಾವತಿಸಿರುವುದು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕರ್ನಾಟಕ ಆರ್ಥಿಕ ಸಂಹಿತೆಗೆ ವಿರುದ್ಧವಾಗಿದ್ದು, ಪಾವತಿಸಿದ ಅಧಿಕಾರಿಗಳು ಹೊಣೆಗಾರರಾಗಿರುತ್ತಾರೆ ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

4. ಸರಬರಾಜು ಆದ ಸಾಮಗ್ರಿಗಳು ನಿರ್ಧಿಷ್ಟ Specification ಪ್ರಕಾರ ಇಲ್ಲದಿರುವುದನ್ನು ಹಾಗೂ ಅವುಗಳ ಮಾದರಿಯನ್ನು ಪಡೆಯದೇ ಖರೀದಿಗೆ ಕ್ರಮವಹಿಸಿರುವುದನ್ನು ಸಭೆಯು ಗಮನಿಸಿತು. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ಪ್ರಕಾರ ಸಾಮಗ್ರಿಗಳು ಸ್ಥಳೀಯ ಮಾರುಕಟ್ಟೆಯಲ್ಲಿ ರೂ.1750/- ಅಥವಾ ಅದಕ್ಕಿಂತ ಕಡಿಮೆ ದರಗಳಲ್ಲಿ ಲಭ್ಯವಿರುವುದನ್ನು ಪರಿಶೀಲಿಸದೇ ಮತ್ತು ಮಾರುಕಟ್ಟೆಯಿಂದ ದರಪಟ್ಟಿಯನ್ನು ಪಡೆಯದೇ, ಹಾಗೂ KTPP ಕಾಯ್ದೆಯಲ್ಲಿನ ನಿಯಮಗಳನ್ನು ಪಾಲಿಸದೇ ಹಾಗೂ ಮಾನ್ಯ ಸಚಿವರ ಅನುಮೋದನೆಯನ್ನು ಪಡೆಯದೇ ಹಿಂದಿನ ಸಂಘದ ಉಪಾಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು ಅವರ ಹಂತದಲ್ಲಿಯೇ ತರಾತುರಿಯಿಂದ ಖರೀದಿಸಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು.

5. ಸರಬರಾಜು ಆದ ಸಾಮಗ್ರಿಗಳ ಗುಣಮಟದ್ದ ವ್ಯತ್ಯಾಸದ ಬಗ್ಗೆ ಕಾಯರ್ ಬೋರ್ಡ್‌ನಿಂದ ಮಾದರಿಗಳನ್ನು ಪಡೆಯದೇ, ಮುಕ್ತ ಮಾರುಕಟ್ಟೆಯಿಂದ ಮಾದರಿಗಳನ್ನು ಪಡೆಯದೆ A, B &C ದರ್ಜೆಗಳ ಮಾದ್ದರಿಗಳನ್ನು ಹೋಲಿಕೆ ಮಾಡದೇ ಗುಣಮಟ್ಟದ ಬಗ್ಗೆ 3ನೇ ಪಾರ್ಟಿಯಿಂದ Random ತಪಾಸಣೆ ನಡೆಸದೇ ಅಥವಾ ಕಾಯರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಿಂದ ಗುಣಮಟ್ಟದ ಬಗ್ಗೆ ದೃಢೀಕರಣ ಪಡೆಯದೇ ಖರೀದಿಸಿರುವ ಕ್ರಮವನ್ನು ಸಭೆಯು ಆಕ್ಷೇಪಿಸಿತು. ಹೀಗೆ ನಿಯಮಬಾಹಿರವಾಗಿ ಖರೀದಿ ಪ್ರಕ್ರಿಯೆ ನಡೆಯುತ್ತಿದೆ ಎಂಬ ವಿಷಯ ಮಾನ್ಯ ಸಚಿವರ ಗಮನಕ್ಕೆ ಬಂದಾಗ ಅವರು ದೂರವಾಣಿಯಲ್ಲಿ ಗುಣಮಟ್ಟದ ಬಗ್ಗೆ 3ನೇ ಪಾರ್ಟಿಯಿಂದ ತಪಾಸಣೆ ಮಾಡಿಸದೇ ಬಿಲ್ಲುಗಳನ್ನು ಪಾವತಿಸಬಾರದೆಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದರೂ ಸಹ ಹಣ ಪಾವತಿಸಿರುವುದನ್ನು ಸಭೆಯು ತೀವ್ರವಾಗಿ ಆಕ್ಷೇಪಿಸಿತು.

ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಅಂತಿಮವಾಗಿ ಈ ಕೆಳಕಂಡಂತೆ ತೀರ್ಮಾನಿಸಿತು.

1) ಈ ಹಗರಣಕ್ಕೆ ಸಂಬಂಧಿಸಿದ ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳ ಕರ್ತವ್ಯಲೋಪದ ಬಗ್ಗೆ ಉನ್ನತ ಮಟ್ಟದ ತನಿಖಾ ಸಂಸ್ಥೆಯಿಂದ ತೀವ್ರ ತನಿಖೆಗೆ ಒಳಪಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮುಕ್ತಾಯಗೊಳ್ಳುವವರೆಗೂ ಹಾಸಿಗೆ ಮತ್ತು ದಿಂಬುಗಳ ಸರಬರಾಜು ಬಾಕಿ ಮೊತ್ತವನ್ನು ಸಂಘವು ಪಾವತಿಸಬಾರದು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 3</u>

<u>2015-16ನೇ ಸಾಲಿನಲ್ಲಿ ಸಂಘಕ್ಕೆ ನಿಗಧಿಪಡಿಸಿದ ಅನುದಾನ, ಬಿಡುಗಡೆ, ಖರ್ಚು ಹಾಗೂ ಶಿಲ್ಕಿನ ವಿವರಗಳು</u>

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2015-16ನೇ ಸಾಲಿನ ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಜೂನ್ 2015ರ ಅಂತ್ಯಕ್ಕೆ ಬಿಡುಗಡೆ ಮತ್ತು ಭರಿಸಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಿದೆ.

**<u>ತೀರ್ಮಾನ:</u>**

**ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2015-16ನೇ ಸಾಲಿನ ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಜೂನ್ 2015ರ ಅಂತ್ಯಕ್ಕೆ ಬಿಡುಗಡೆ ಮತ್ತು ಭರಿಸಿದ ವೆಚ್ಚದ ವಿವರಗಳನ್ನು ಅವಲೋಕಿಸಿ, ಅನುಮೋದಿಸಿತು.**

<u>ವಿಷಯ ಸಂಖ್ಯೆ: 4</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 2013-14ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಅನುಮೋದಿಸಿ ವಾರ್ಷಿಕ ಸರ್ವ ಸಾಮಾನ್ಯ ಸದಸ್ಯರ ಸಭೆಗೆ ಮಂಡಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2013-14ನೇ ಸಾಲಿನ ಲೆಕ್ಕ ಪತ್ರಗಳನ್ನು ಚಾರ್ಟೆಡ್ ಅಕೌಂಟೆಂಟ್‌ರವರಾದ **ಮೆ|| ಪೂಜಾರಿ ಮತ್ತು ಅಸೋಸಿಯೇಟ್ಸ್, ಬೆಂಗಳೂರು** ರವರು ಪರಿಶೀಲನೆ ನಡೆಸಿರುತ್ತಾರೆ. 2013-14ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಸಂಘದ ಆರ್ಥಿಕ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ತೋರಿಸಲಾಗಿದೆ. 2013-14ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಆಡಳಿತ ಮಂಡಳಿ ಸಭೆಯ ಅನುಮೋದನೆ ಕೋರಿ, ಸರ್ವ ಸದಸ್ಯರ ವಾರ್ಷಿಕ ಮಹಾಸಭೆಗೆ ಮಂಡಿಸಲು ಕೋರಿದೆ.

**<u>ತೀರ್ಮಾನ:</u>**

ಆಡಳಿತ ಮಂಡಳಿ ಸಭೆಯು ಸಂಘದ 2013-14ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಅನುಮೋದಿಸಿ, ಸರ್ವಸದಸ್ಯರ ವಾರ್ಷಿಕ ಮಹಾ ಸಭೆಗೆ ಮಂಡಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

## ವಿಷಯ ಸಂಖ್ಯೆ: 5

## 2014-15 ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವ ಬಗ್ಗೆ.

**ಮೆ॥ ಪೂಜಾರಿ** ಮತ್ತು ಅಸೋಸಿಯೇಟ್ಸ್‌ರವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಲೆಕ್ಕ ಪತ್ರಗಳನ್ನು ಕಳೆದ 7 ವರ್ಷಗಳಿಂದ ಗುಣಮಟ್ಟದ ಪರಿಶೋಧನೆ ನಡೆಸಿ, ವರದಿ ನೀಡುತ್ತಿದ್ದಾರೆ. 2013-14ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಸದರಿ ಸಂಸ್ಥೆಗೆ ವಾರ್ಷಿಕ ಸೇವಾ ಶುಲ್ಕ ರೂ. 50,000/- ಗಳನ್ನು ಮತ್ತು ಚಾಲ್ತಿಯಲ್ಲಿರುವ ಸೇವಾ ತೆರಿಗೆಯನ್ನು ಪ್ರತ್ಯೇಕವಾಗಿ ಲೆಕ್ಕ ಪರಿಶೋಧನಾ ಶುಲ್ಕವಾಗಿ ಸದರಿ ಸಂಸ್ಥೆಗೆ ಸಂಘವು ಪಾವತಿಸುತ್ತಿದೆ.

ಮೇಲೆ ಹೇಳಿದ ಲೆಕ್ಕ ಪರಿಶೋಧಕರು, ಸಂಘದ ಲೆಕ್ಕ ಪರಿಶೋಧನೆಯ ಜೊತೆಗೆ ಆದಾಯ ತೆರಿಗೆ ಇಲಾಖೆಗೆ ಸಂಘದ ಪರವಾಗಿ ವಾರ್ಷಿಕ return ಹಾಗೂ ತ್ರೈಮಾಸಿಕವಾಗಿ e-TDS return ಗಳನ್ನು ಲೆಕ್ಕಪರಿಶೋಧಕರು ಸಲ್ಲಿಸುತ್ತಿದ್ದಾರೆ. ಈ ಬಾಬ್ತು ಪ್ರತ್ಯೇಕವಾಗಿ **ರೂ.22,000/-ಗಳನ್ನು** ಪಾವತಿಸಲಾಗುತ್ತಿದೆ.

2014-15ನೇ ಸಾಲಿಗೆ ಸಂಘದ ಲೆಕ್ಕ ಪರಿಶೋಧನೆ ಹಾಗೂ ಆದಾಯ ತೆರಿಗೆ ಇಲಾಖೆಯ ಕೆಲಸದಲ್ಲಿ ನೆರವಾಗುವಂತೆ, ಲೆಕ್ಕಪರಿಶೋಧಕ (ಚಾರ್ಟೆಡ್ ಅಕೌಂಟೆಂಟ್)ರವರ ಸೇವೆಯು ಅಗತ್ಯವಾಗಿದ್ದು ಚಾರ್ಟಡ್ ಅಕೌಂಟೆಂಟ್‌ರವರನ್ನು ನೇಮಕ ಮಾಡಿಕೊಳ್ಳಲು ಆಡಳಿತ ಮಂಡಳಿಯ ತೀರ್ಮಾನ ಕೋರಿದೆ.

## ತೀರ್ಮಾನ:

**ಲೆಕ್ಕ ಪರಿಶೋಧಕರನ್ನು 2014-15ನೇ ಸಾಲಿಗೆ ನೇಮಕ ಮಾಡಿಕೊಳ್ಳಲು ಆಡಳಿತ ಮಂಡಳಿಯು ತೀರ್ಮಾನಿಸಿತು.**

## ವಿಷಯ ಸಂಖ್ಯೆ: 6

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನಿಶ್ಚಿತ ಠೇವಣಿ ಮತ್ತು ಉಳಿತಾಯ ಖಾತೆಯ ಮೇಲೆ ಗಳಿಸಿದ ಬಡ್ಡಿ ಹಣವನ್ನು ವಸತಿ ಶಾಲಾ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುವ ಬಗ್ಗೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಆಯ-ವ್ಯಯದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆಯಾಗುತ್ತಿದೆ.

ಸದಸ್ಯ ಕಾರ್ಯದರ್ಶಿ — ಅಧ್ಯಕ್ಷರು

1) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಕೇಂದ್ರ ಕಛೇರಿ ನಿರ್ವಹಣೆ
2) ಹುಡ್ಕೋ ಸಾಲ ಅಸಲು ಮತ್ತು ಬಡ್ಡಿ ಪಾವತಿ
3) ವಸತಿ ಶಾಲೆಗಳ ನಿರ್ವಹಣೆ
4) ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣ
5) ವಸತಿ ಶಾಲೆಗಳ ದುರಸ್ತಿ

ಸಂಘವು ಬಿಡುಗಡೆಯಾದ ಅನುದಾನವನ್ನು ಉಳಿತಾಯ ಖಾತೆಯಲ್ಲಿ ಹಾಗೂ ಹಂತ ಹಂತವಾಗಿ ವೆಚ್ಚ ಭರಿಸಬೇಕಾದ ಹಣವನ್ನು ಅಲ್ಪಾವಧಿ ನಿಶ್ಚಿತ ಠೇವಣಿಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇರಿಸಲಾಗುತ್ತಿದೆ. ಉಳಿತಾಯ ಖಾತೆ/ನಿಶ್ಚಿತ ಠೇವಣಿಗಳ ಮೇಲೆ ದಿನಾಂಕ:30-06-2015ರವರೆಗೆ ರೂ.1400.00 ಲಕ್ಷಗಳ ಬಡ್ಡಿಯನ್ನು ಗಳಿಸಿದ್ದು, ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

ದಿನಾಂಕ:29-05-2015 ರಂದು ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆರವರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಪೂರ್ಣಪ್ರಮಾಣದ ಅನುದಾನ ಬಿಡುಗಡೆಯಾಗುತ್ತಿದ್ದು, ಸಂಘದ ಉಳಿತಾಯ ಖಾತೆ/ನಿಶ್ಚಿತ ಠೇವಣಿಯಿಂದ ಗಳಿಸಿದ ಬಡ್ಡಿ ಹಣವನ್ನು ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳಲು ಆರ್ಥಿಕ ಇಲಾಖೆಯ ಪೂರ್ವಾನುಮತಿ ಪಡೆಯಬೇಕೆಂದು ಸೂಚಿಸಿರುತ್ತಾರೆ. ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ತೀರ್ಮಾನ ಕೋರಿದೆ.

**ತೀರ್ಮಾನ:**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಕಾರ್ಯಕ್ರಮಗಳಿಗೆ ಇಲಾಖಾವರು ಬಿಡುಗಡೆಯಾಗಿ ತಕ್ಷಣ ಉಪಯೋಗವಾಗದೇ ಇರುವ ಅನುದಾನವನ್ನು ಉಳಿತಾಯ ಖಾತೆ/ನಿಶ್ಚಿತ ಠೇವಣಿಗಳಲ್ಲಿ ಇರಿಸಲಾಗಿದ್ದು, ಜೂನ್ 2015ರ ಅಂತ್ಯಕ್ಕೆ ಗಳಿಸಿದ ಬಡ್ಡಿ ಹಣವನ್ನು ಆಡಳಿತ ಮಂಡಳಿ ಸಭೆಯು ಅವಲೋಕಿಸಿತು.**

**ವಿಷಯ ಸಂಖ್ಯೆ: 7**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಹೂಡಿಕೆ ಸಮಿತಿ (Investment Committee) ರಚಿಸುವ ಬಗ್ಗೆ**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಸರ್ಕಾರವು ವಿವಿಧ ಇಲಾಖೆಗಳಿಂದ ಬಿಡುಗಡೆ ಮಾಡಿದ ಹಣವು ಸಂಘದ ಉಳಿತಾಯ ಖಾತೆಯಲ್ಲಿರುತ್ತದೆ. ಇದಕ್ಕೆ ಶೇ.4% ರಷ್ಟು ಬಡ್ಡಿ ದರವನ್ನು ಬ್ಯಾಂಕ್ ನೀಡುತ್ತಿದೆ. ಆದರೆ, ಇದೇ ಹಣವನ್ನು ನಿಶ್ಚಿತ ಠೇವಣಿಯಾಗಿ ಹೂಡಿಕೆ ಮಾಡಿದಲ್ಲಿ ಶೇ.8 ರಿಂದ 8.5% ರಷ್ಟು ಹೆಚ್ಚಿನ ಬಡ್ಡಿ ಸಂಘಕ್ಕೆ ಸಂಗ್ರಹವಾಗುತ್ತದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸರ್ಕಾರಿ ಸುತ್ತೋಲೆ ಸಂಖ್ಯೆ:ಹಿಪಿಇ 30 ಎಆರ್‌ಒ 2010, ದಿ:19-06-2012 ರಲ್ಲಿ ಯಾವುದೇ ಹೂಡಿಕೆಯನ್ನು ಹೂಡಿಕೆ ಸಮಿತಿಯಲ್ಲಿ ಮಂಡಿಸಿ ಸಮಿತಿಯ ಒಪ್ಪಿಗೆ ಪಡೆದ ನಂತರವೇ ಠೇವಣಿ ಇಡಬೇಕೆಂದು ಆದೇಶಿಸಿದೆ.

ಆದ್ದರಿಂದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಹೂಡಿಕೆ ಸಮಿತಿ ರಚಿಸಲು ಅನುಮೋದಿಸಿರುತ್ತಾರೆ. ಅದರಂತೆ, ಸಮಿತಿಯನ್ನು ರಚಿಸಿ, ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಆದೇಶಿಸಿರುತ್ತಾರೆ.

| | | |
|---|---|---|
| 1. ಕಾರ್ಯನಿರ್ವಾಹಕ ನಿರ್ದೇಶಕರು | - | ಅಧ್ಯಕ್ಷರು |
| 2. ಆರ್ಥಿಕ ಸಲಹೆಗಾರರು | - | ಸದಸ್ಯರು |
| 3. ಲೆಕ್ಕಾಧಿಕಾರಿಗಳು | - | ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ ಸಮಿತಿಯು ಸಂಘದ ಖಾತೆಗಳಲ್ಲಿ ಹೆಚ್ಚಿನ ಮೊತ್ತವು ಕಂಡುಬಂದಾಗ, ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳ ಬಡ್ಡಿದರವನ್ನು ಅಂತರ್ಜಾಲದ ಮೂಲಕ ಪಡೆದು ತಾಳೆಪಟ್ಟಿಯನ್ನು ತಯಾರಿಸಿ, ಹೂಡಿಕೆ ಸಮಿತಿ ಸಭೆಯಲ್ಲಿ ವಿಷಯ ಮಂಡಿಸಿ, ಅತೀ ಹೆಚ್ಚು ಬಡ್ಡಿದರ ನೀಡುವ ಬ್ಯಾಂಕ್‌ನಲ್ಲಿ ಮಾತ್ರ ಠೇವಣಿ ಇಟ್ಟು ತದನಂತರ ಮಾನ್ಯ ಸಂಘದ ಉಪಾಧ್ಯಕ್ಷರ ಘಟನೋತ್ತರ ಅನುಮೋದನೆ ಪಡೆದುಕೊಳ್ಳಲಾಗುವುದು.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ಅನುಮೋದನೆ ಕೋರಿದೆ.

<u>ತೀರ್ಮಾನ:</u>

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಹೂಡಿಕೆ ಸಮಿತಿ ರಚಿಸಿರುವ ಕ್ರಮವನ್ನು ಸಭೆಯು ಅನುಮೋದಿಸಿತು ಹಾಗೂ ಇನ್ನು ಮುಂದೆ ಸ್ವೀಕೃತವಾಗುವ ಅನುದಾನವು ತಕ್ಷಣವೇ ಬಳಕೆಗೆ ಬೇಕಾಗದಿದ್ದಲ್ಲಿ ಅಂಥ ಅನುದಾನವನ್ನು ನಿಶ್ಚಿತ ಠೇವಣಿಯಲ್ಲಿ ವಿಳಂಬವಿಲ್ಲದೇ ಹೂಡಿಕೆ ಮಾಡುವಂತೆ ನಿರ್ದೇಶಿಸಿತು.**

<u>ವಿಷಯ ಸಂಖ್ಯೆ: 8</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರ ಪ್ರತ್ಯಾಯೋಜನೆ (**Delegation of Powers**) ನೀಡುವ ಬಗ್ಗೆ</u>

ಕರ್ನಾಟಕ ಘನ ಸರ್ಕಾರವು 1999ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸ್ಥಾಪಿಸಿತು. ಅದರ ಉದ್ದೇಶವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಭಾವಂತ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ಸ್ಥಾಪಿಸಿ ಉತ್ತಮ ಶಿಕ್ಷಣವನ್ನು ನೀಡುವುದಾಗಿರುತ್ತದೆ. ಪ್ರಸ್ತುತ 506 ವಸತಿ ಶಾಲೆಗಳಿದ್ದು, ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಸಂಘದ ಕೇಂದ್ರ ಕಛೇರಿಯಿಂದ ಆಡಳಿತಾತ್ಮಕ ನಿರ್ದೇಶನಗಳನ್ನು ನೀಡಲಾಗುತ್ತಿದ್ದು, ಉನ್ನತ ಮಟ್ಟದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನಗಳನ್ನು ಸಂಘದ ಉಪಾಧ್ಯಕ್ಷರು ಮತ್ತು ಮಾನ್ಯ ಅಧ್ಯಕ್ಷರು ನೀಡುವ ಸೂಚನೆಗಳ ಮೇರೆಗೆ ತೆಗೆದುಕೊಳ್ಳಲಾಗುತ್ತದೆ. ಸಂಘದ ವಾರ್ಷಿಕ ಅನುದಾನವು ರೂ.1100.00 ಕೋಟಿಗಳನ್ನು ಮೀರಿದ್ದು, ಅದನ್ನು ಮುಖ್ಯವಾಗಿ ಈ ಕೆಳಕಂಡಂತೆ 4 ವಿಭಾಗಗಳಲ್ಲಿ ವೆಚ್ಚ ಮಾಡಲಾಗುತ್ತದೆ.

1. ಆಡಳಿತಾತ್ಮಕ ವೆಚ್ಚ (ವೇತನ, ಭತ್ಯೆ, ಇತ್ಯಾದಿ)
2. ಶಾಲೆಗಳ ನಿರ್ವಹಣೆ (ಆಹಾರ ಪೂರೈಕೆ, ಪಠ್ಯಪುಸ್ತಕ, ಸಮವಸ್ತ್ರ ಸರಬರಾಜು, ಇತ್ಯಾದಿ).
3. ಶೈಕ್ಷಣಿಕ ವೆಚ್ಚಗಳು (ತರಬೇತಿ, ಬೋಧನಾ ಪರಿಕರಗಳು)
4. ಕಾಮಗಾರಿ ವೆಚ್ಚಗಳು (ಕಟ್ಟಡ ನಿರ್ಮಾಣ, ನಿರ್ವಹಣೆ, ಇತ್ಯಾದಿ)

ಕೇಂದ್ರ ಕಛೇರಿಯಲ್ಲಿ ಮೇಲೆ ಹೇಳಿದ ನಾಲ್ಕು ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಿಗೆ ಶಾಖಾ ಮುಖ್ಯಸ್ಥರಾಗಿ ಹಿರಿಯ ಅಧಿಕಾರಿಗಳಿರುತ್ತಾರೆ. ಶಾಲೆ, ಕಾಲೇಜುಗಳಲ್ಲಿ ಪ್ರಾಂಶುಪಾಲರು ಮತ್ತು ವಸತಿ ನಿಲಯಗಳಿಗೆ ವಾರ್ಡನ್‌ಗಳು ಮುಖ್ಯಸ್ಥರಾಗಿರುತ್ತಾರೆ.

ಇದುವರೆವಿಗೂ ಸಂಘದ ಖರ್ಚು ವೆಚ್ಚಗಳನ್ನು ಅನೇಕ ಹಂತದಲ್ಲಿ ನಿರ್ವಹಿಸಲಾಗುತ್ತಿದ್ದು, ಕಡತಗಳನ್ನು ಅಗತ್ಯಕ್ಕನುಗುಣವಾಗಿ ಸೂಕ್ತಾಧಿಕಾರಿಗಳಿಗೆ ಕಳುಹಿಸಲಾಗುತ್ತಿದೆ. ಆದರೆ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳನ್ನು ವಿದ್ಯುಕ್ತವಾಗಿ ಹಲವು ಹಂತಗಳಲ್ಲಿ ಹಂಚಿಕೆ ಮಾಡಲಾಗಿಲ್ಲ. ಇವರಿಗೆ ಸಿಬ್ಬಂದಿಗಳಿಗೆ ರಜೆ ಮಂಜೂರಾತಿಯಿಂದ ಹಿಡಿದು ಸಣ್ಣ ಪುಟ್ಟ ತುರ್ತುವೆಚ್ಚಗಳನ್ನು ನಿರ್ವಹಿಸಲು ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಅಗತ್ಯವಿರುತ್ತದೆ. ಆದ್ದರಿಂದ ವಿವಿಧ ಶಾಖೆಗಳಲ್ಲಿ ನಿರ್ವಹಿಸಲಾಗುತ್ತಿರುವ ಅಧಿಕಾರಗಳನ್ನು ವಿವಿಧ ಪ್ರಾಧಿಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಲು, ಸಂಘದ ಆಡಳಿತವು ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ಅಧಿಕಾರ ಪ್ರತ್ಯಾಯೋಜನೆಯನ್ನು ಶಾಖಾವಾರು ಕ್ರೋಡೀಕರಿಸಿ ಮಂಡಿಸಲಾಗಿದೆ.

ಆಡಳಿತ ಮಂಡಳಿ ಇದನ್ನು ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಲು ಮಂಡಿಸಿದೆ.

**ತೀರ್ಮಾನ:**

**ವಿಷಯನ್ನು ಆಡಳಿತ ಮಂಡಳಿ ಅವಲೋಕಿಸಿ, ಪ್ರಸ್ತಾಪಿಸಿದ ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಲಹೆಗಾರರು, ಪ.ಜಾತಿ/ಗಿರಿಜನ ಉಪಯೋಜನೆ ಇವರುಗಳು ಪರಿಶೀಲಿಸಿ, ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 9**

**ವಸತಿ ಶಾಲಾ/ಕಾಲೇಜುಗಳ 2015-16ನೇ ಸಾಲಿನ ನಿರ್ವಹಣಾ ಕ್ರಿಯಾಯೋಜನೆಯನ್ನು ಪರಿಷ್ಕರಿಸಿ ಹೆಚ್ಚಿಸಿರುವ ಬಗ್ಗೆ.**

ಕರ್ನಾಟಕ ರಾಜ್ಯ ಕ್ರೈಸ್ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು ರವರ ಪತ್ರ ದಿನಾಂಕ : 01-06-2015 ಪತ್ರದಲ್ಲಿ 2015-16ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಕೆಲವೊಂದು ಸೌಲಭ್ಯಗಳ ದರವನ್ನು ಹೆಚ್ಚಿಸಲು ಮನವಿ ಸಲ್ಲಿಸಿದ್ದಾರೆ. ಈ ಪ್ರಸ್ತಾವನೆಯಲ್ಲಿ ನಿಗಧಿಪಡಿಸಿದ ಮೊತ್ತವು ಕಡಿಮೆ ಇರುವುದಾಗಿ ತಿಳಿಸಿ ಈ ಕೆಳಕಂಡಂತೆ ದರಗಳನ್ನು ಪರಿಷ್ಕರಿಸಲು ಹಾಗೂ 2015-16ನೇ ಸಾಲಿನಲ್ಲಿ ಅಳವಡಿಸಿಕೊಳ್ಳಲು ಪ್ರಸ್ತಾಪಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ. | 2014–15ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಬಿಡುಗಡೆಯಾದ ಅನುದಾನ | | 2015–16ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಹೆಚ್ಚಿಸಬೇಕಾದ ಅನುದಾನ | | 2015–16ರ ಕ್ರಿಯಾಯೋಜನೆಯನ್ನು ಮಾರ್ಪಡಿಸಿಕೊಂಡಲ್ಲಿ ತಗಲುವ ಹೆಚ್ಚುವರಿ ವೆಚ್ಚ (ಪ್ರತಿ ವಿದ್ಯಾರ್ಥಿಗೆ/ಪ್ರತಿ ವಸತಿ ಶಾಲೆಗೆ) |
|---|---|---|---|---|---|
| | ವಿವರ | ಮೊತ್ತ ರೂ. ಗಳಲ್ಲಿ | ವಿವರ | ಮೊತ್ತ ರೂ. ಗಳಲ್ಲಿ | |
| 1 | 2 | 3 | 4 | 5 | 6 |
| 1 | ವಸತಿ ಶಾಲಾ ಕಛೇರಿ ವೆಚ್ಚ (ಪೇಪರ್, ಸೀಮೆಸುಣ್ಣ, ಡೆಸ್ಟರ್, ಇತ್ಯಾದಿಗಳಿಗೆ) | 4500 | ವಸತಿ ಶಾಲಾ ಕಛೇರಿ ವೆಚ್ಚ (ಪೇಪರ್, ಸೀಮೆಸುಣ್ಣ, ಡೆಸ್ಟರ್, ಇತ್ಯಾದಿಗಳಿಗೆ) | 15000 | 10500 |
| 2 | ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ | 5000 | ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ | 10000 | 5000 |
| 3 | ಕಟ್ಟಡಗಳ ಸಣ್ಣಪುಟ್ಟ ರಿಪೇರಿ ವೆಚ್ಚಕ್ಕಾಗಿ | ಸ್ವಂತ ಕಟ್ಟಡಕ್ಕೆ ರೂ. 50000/– ಬಾಡಿಗೆ/ಉಚಿತ ಕಟ್ಟಡಕ್ಕೆ ರೂ. 10000/– | ಕಟ್ಟಡಗಳ ಸಣ್ಣಪುಟ್ಟ ರಿಪೇರಿ ವೆಚ್ಚಕ್ಕಾಗಿ | ಸ್ವಂತ ಕಟ್ಟಡಕ್ಕೆ ರೂ. 250000/– ಬಾಡಿಗೆ/ಉಚಿತ ಕಟ್ಟಡಕ್ಕೆ ರೂ. 100000/– | ಸ್ವಂತ ಕಟ್ಟಡಕ್ಕೆ ರೂ. 200000/– ಬಾಡಿಗೆ/ಉಚಿತ ಕಟ್ಟಡಕ್ಕ ರೂ. 90000/– |
| 4 | ರಾಷ್ಟ್ರೀಯ ಹಬ್ಬಗಳ ದಿನಾಚರಣೆಯ ವೆಚ್ಚಕ್ಕಾಗಿ | 5000 | ರಾಷ್ಟ್ರೀಯ ಹಬ್ಬಗಳ ದಿನಾಚರಣೆಯ ವೆಚ್ಚಕ್ಕಾಗಿ | 10000 | 5000 |
| 5 | ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ 10 ತಿಂಗಳಿಗೆ ಕ್ಷೌರ ವೆಚ್ಚಕ್ಕಾಗಿ | 130 | ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ 10 ತಿಂಗಳಿಗೆ ಕ್ಷೌರ ವೆಚ್ಚಕ್ಕಾಗಿ | 300 | 170 |
| 6 | ಪ್ರತಿ ವಸತಿ ಶಾಲೆಗೆ ವಾರ್ಷಿಕವಾಗಿ ವೈದ್ಯಕೀಯ ವೆಚ್ಚ | 10000 | ಪ್ರತಿ ವಸತಿ ಶಾಲೆಗೆ ವಾರ್ಷಿಕವಾಗಿ ವೈದ್ಯಕೀಯ ವೆಚ್ಚ | 20000 | 10000 |
| 7 | ಪ್ರಾಂಶುಪಾಲರ ಪ್ರಯಾಣ ಭತ್ಯೆ/ದಿನ ಭತ್ಯೆ ವಾರ್ಷಿಕ | – | | 20000 | 20000 |
| 8 | ಶಾಲೆಯ ಆದಾಯ ತೆರಿಗೆ ರಿಟರ್ನ್ಸ್ ಪಾವತಿಸಲು | – | | 20000 | 20000 |

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ದರವನ್ನು ಪರಿಷ್ಕರಿಸಲು 2015–16ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಈ ಕೆಳಕಂಡ ಐಟಂಗಳಿಗೆ ಸಂಬಂಧಿಸಿದಂತೆ ಪ್ರತಿ ವಸತಿ ಶಾಲೆಗೆ ಭರಿಸಬೇಕಾದ ವೆಚ್ಚವನ್ನು ಈ ಕೆಳಕಂಡತಿದೆ.

| ಕ್ರ. ಸಂ | 2014–15ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡ ಕಾಲಂಗಳ ವಿವರ | | 2015–16ನೇ ಸಾಲಿನ ಕ್ರಿಯಾಯೋಜನೆಯಂತೆ ಮಾರ್ಪಡಿಸಿಕೊಂಡ ಕಾಲಂಗಳ ವಿವರ | | ಕ್ರ.ಸಂ. 4 ಮತ್ತು 5 ರಂತೆ 2015–16ರ ಕ್ರಿಯಾಯೋಜನೆಯನ್ನು ಮಾರ್ಪಡಿಸಿಕೊಂಡಲ್ಲಿ ತಗಲುವ ಹೆಚ್ಚುವರಿ ವೆಚ್ಚ (ಪ್ರತಿ ವಿದ್ಯಾರ್ಥಿಗೆ/ಪ್ರತಿ ವಸತಿ ಶಾಲೆಗೆ) |
|---|---|---|---|---|---|
| | ವಿವರ | ಮೊತ್ತ ರೂ. ಗಳಲ್ಲಿ | ವಿವರ | ಮೊತ್ತ ರೂ. ಗಳಲ್ಲಿ | |
| 1 | 2 | 3 | 4 | 5 | 6 |
| 1 | ವಸತಿ ಶಾಲಾ ಕಛೇರಿ ವೆಚ್ಚ (ಪೇಪರ್, ಸೀಮೆಸುಣ್ಣ, ಡೆಸ್ಟರ್, ಇತ್ಯಾದಿಗಳಿಗೆ) | 4500 | ವಸತಿ ಶಾಲಾ ಕಛೇರಿ ವೆಚ್ಚ (ಪೇಪರ್, ಸೀಮೆಸುಣ್ಣ, ಡೆಸ್ಟರ್, ಇತ್ಯಾದಿಗಳಿಗೆ) | 10000 | 5500 |
| 2 | ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ | 5000 | ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ | 7500 | 2500 |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| | | | | | |
|---|---|---|---|---|---|
| 3 | ಕಟ್ಟಡಗಳ ಸಣ್ಣಪುಟ್ಟ ರಿಪೇರಿ ವೆಚ್ಚಕ್ಕಾಗಿ | ಸ್ವಂತ ಕಟ್ಟಡಕ್ಕೆ ರೂ. 50000/- ಬಾಡಿಗೆ/ಉಚಿತ ಕಟ್ಟಡಕ್ಕೆ ರೂ. 10000/- | ಕಟ್ಟಡಗಳ ಸಣ್ಣಪುಟ್ಟ ರಿಪೇರಿ ವೆಚ್ಚಕ್ಕಾಗಿ | ಸ್ವಂತ ಕಟ್ಟಡಕ್ಕೆ ರೂ. 200000/- ಬಾಡಿಗೆ/ಉಚಿತ ಕಟ್ಟಡಕ್ಕೆ ರೂ. 50000/- | **ಸ್ವಂತ ಕಟ್ಟಡಕ್ಕೆ ರೂ. 150000/- ಬಾಡಿಗೆ/ಉಚಿತ ಕಟ್ಟಡಕ್ಕೆ ರೂ. 40000/-** |
| 4 | ರಾಷ್ಟ್ರೀಯ ಹಬ್ಬಗಳ ದಿನಾಚರಣೆಯ ವೆಚ್ಚಕ್ಕಾಗಿ | 5000 | ರಾಷ್ಟ್ರೀಯ ಹಬ್ಬಗಳ ದಿನಾಚರಣೆಯ ವೆಚ್ಚಕ್ಕಾಗಿ | 7500 | **2500** |
| 5 | ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ 10 ತಿಂಗಳಿಗೆ ಕ್ಷೌರ ವೆಚ್ಚಕ್ಕಾಗಿ | 130 | ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ 10 ತಿಂಗಳಿಗೆ ಕ್ಷೌರ ವೆಚ್ಚಕ್ಕಾಗಿ | 200 | **70** |
| 6 | ಪ್ರತಿ ವಸತಿ ಶಾಲೆಗೆ ವಾರ್ಷಿಕವಾಗಿ ವೈದ್ಯಕೀಯ ವೆಚ್ಚ | 10000 | ಪ್ರತಿ ವಸತಿ ಶಾಲೆಗೆ ವಾರ್ಷಿಕವಾಗಿ ವೈದ್ಯಕೀಯ ವೆಚ್ಚ | 20000 | **10000** |
| 7 | 8, 9 ಮತ್ತು 10ನೇ ತರಗತಿಯ ಪ್ರತಿ ಶಾಲೆಯ ವಿದ್ಯಾರ್ಥಿನಿಯರಿಗೆ 10 ತಿಂಗಳಿಗೆ ನ್ಯಾಪ್‌ಕಿನ್ ವೆಚ್ಚಕ್ಕಾಗಿ | 25 | 8, 9 ಮತ್ತು 10ನೇ ತರಗತಿಯ ಪ್ರತಿ ಶಾಲೆಯ ವಿದ್ಯಾರ್ಥಿನಿಯರಿಗೆ 10 ತಿಂಗಳಿಗೆ ನ್ಯಾಪ್‌ಕಿನ್ ವೆಚ್ಚಕ್ಕಾಗಿ | 35 | 15 |
| **ಹೊಸದಾಗಿ ಸೇರ್ಪಡೆಗೊಂಡ ಕಾಲಂ** | | | | | |
| 8 | - | 0 | ಪ್ರಾಂಶುಪಾಲರ ಪ್ರಯಾಣ ಭತ್ಯೆ/ದಿನ ಭತ್ಯೆ ವಾರ್ಷಿಕ | 10000 | 10000 |
| **Total** | | **84655** | | **305235** | **220585** |

ಪ್ರತಿ ವಸತಿ ಶಾಲೆಗೆ ವಾರ್ಷಿಕವಾಗಿ ರೂ. 220585/- ಗಳನ್ನು ಭರಿಸಬೇಕಾಗಿದ್ದು, ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 505 ವಸತಿ ಶಾಲೆಗಳಿಗೆ ವರ್ಗಾವಾರು ಭರಿಸಬೇಕಾದ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

| ಕ್ರ. ಸಂ. | ವರ್ಗ | ವಸತಿ ಶಾಲೆಗಳ ಒಟ್ಟು ಸಂಖ್ಯೆ | ಒಂದು ವಸತಿ ಶಾಲೆಗೆ ಅಂದಾಜಿಸಿದ ಮೊತ್ತ | ಒಟ್ಟು ಮೊತ್ತ (ಕಾಲಂ 3 * 4) |
|---|---|---|---|---|
| 1 | 2 | 3 | 4 | 5 |
| 1 | ಪ.ಜಾತಿ | 277 | 220585 | 61102045 |
| 2 | ಪ.ವರ್ಗ | 76 | | 16764460 |
| 3 | ಹಿಂ.ವರ್ಗ | 152 | | 33528920 |
| ಒಟ್ಟು | | **505** | **220585** | **111395425** |

ಒಟ್ಟು 505 ಶಾಲೆಗಳಿಗೆ ಒಟ್ಟು ಅಂದಾಜು ಮೊತ್ತ ರೂ. 1114.00 ಲಕ್ಷಗಳ ವೆಚ್ಚ ಭರಿಸಬೇಕಾಗಿರುತ್ತದೆ. ಸದರಿ ಹೆಚ್ಚುವರಿ ವೆಚ್ಚವನ್ನು 2015-16ನೇ ಸಾಲಿನ ಆಯವ್ಯಯದಲ್ಲಿ ವಸತಿ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶಾಲೆಗಳ ನಿರ್ವಹಣೆಗೆ ನಿಗಧಿಪಡಿಸಲಾದ ಅನುದಾನದಲ್ಲೇ ಭರಿಸಲಾಗುವುದು. ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ತೀರ್ಮಾನ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ದೀರ್ಘವಾಗಿ ಚರ್ಚಿಸಿತು, ಕ್ರಮಸಂಖ್ಯೆ (3)ರಲ್ಲಿನ ಸಣ್ಣಪುಟ್ಟ ರಿಪೇರಿ ವೆಚ್ಚಕ್ಕಾಗಿ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವ ವಸತಿ ಶಾಲೆಗಳಿಗೆ ರೂ.50,000/-ಗಳ ಬದಲು ರೂ.1,00000/- ಗಳನ್ನು ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವ ವಸತಿ ಶಾಲೆಗಳಿಗೆ ರೂ.10,000/-ಗಳ ಬದಲು ರೂ.20,000/-ಗಳನ್ನು ಅನುಮೋದಿಸಿತು. ಉಳಿದಂತೆ ವಿಷಯದಲ್ಲಿ ಪ್ರಸ್ತಾಪಿಸಿದ ಎಲ್ಲಾ ಸಾಮಗ್ರಿಗಳ ದರಗಳನ್ನು ಪರಿಷ್ಕರಿಸಲು ಹಾಗೂ ಮಾರ್ಪಾಡು ಮಾಡಲು ಅನುಮೋದಿಸಿತು.**

**ವಿಷಯ ಸಂಖ್ಯೆ: 10**

**ವಸತಿ ಶಾಲೆ /ಕಾಲೇಜುಗಳ ಆಂತರಿಕ ಲೆಕ್ಕ ಪರಿಶೋಧನೆಗೆ ಚಾರ್ಟೆಡ್ ಅಕೌಂಟೆಂಟ್‌ರರುಗಳ ಬದಲಾಗಿ (Karnataka Institute of Public Auditors)KIPA ಸಂಸ್ಥೆಯಿಂದ ನೇಮಕ ಮಾಡಿಕೊಳ್ಳುವ ಬಗ್ಗೆ**

ಸಂಘದ 62 ನೇ ಆಡಳಿತ ಮಂಡಳಿಯ ಸಭೆಯಲ್ಲಿ ಸಂಘದ ಅಧೀನದ ವಸತಿ ಶಾಲೆ/ವಸತಿ ಪದವಿ ಪೂರ್ವ ಕಾಲೇಜುಗಳ ಲೆಕ್ಕ ಪರಿಶೋಧನೆಗಾಗಿ ವಿಭಾಗವಾರು ಚಾರ್ಟೆಡ್ ಅಕೌಂಟೆಂಟ್‌ರರುಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ತೀರ್ಮಾನವಾಗಿದೆ. ಈ ತೀರ್ಮಾನದಂತೆ ಸಂಘವು ಪ್ರಕಟಣೆ ಹೊರಡಿಸಿ, ದರಪಟ್ಟಿಗಳನ್ನು ಪಡೆದಿದೆ. ಸಂಘದ ಪ್ರಕಟಣೆಗೆ ಈ ಕೆಳಕಂಡ ಮೂರು ಸಂಸ್ಥೆಗಳು ಒಂದು ವರ್ಷದ ಅವಧಿಗೆ ದರವನ್ನು ನೀಡಿರುತ್ತಾರೆ. ವಿವರಗಳು ಈ ಕೆಳಕಂಡಂತಿವೆ.

| ಕ್ರಸಂ | ವಿಭಾಗದ ಹೆಸರು | ದರ ನಮೂದಿಸಿದ ಸಂಸ್ಥೆಯ ಹೆಸರು ಮತ್ತು ವಿಳಾಸ | ಒಂದು ವಸತಿ ಶಾಲೆಗೆ ನಮೂದಿಸಿದ ದರ | ವಸತಿ ಶಾಲೆಗಳ ಸಂಖ್ಯೆ | ವಿಭಾಗವಾರು ಒಟ್ಟು ವಸತಿ ಶಾಲೆಗಳಿಗೆ ಭರಿಸಬೇಕಾದ ವೆಚ್ಚ |
|---|---|---|---|---|---|
| 1 | ಬೆಂಗಳೂರು ವಿಭಾಗ | 1. ಹನುಮಂತರಾಯಪ್ಪ ಅಸೋಸಿಯೇಟ್ಸ್,<br>2. ಕೆ.ಆರ್.ವಿ & ಕಂಪೆನಿ<br>3.ಎನ್.ಎನ್. ಆರ್. & ಕಂಪೆನಿ ಚಾರ್ಟೆಡ್ ಅಕೌಂಟೆಂಟ್ | 1) 6350/-<br>2) 5400-/<br>3) 15000/- | 146 | 1) 927100/-<br>2) 788400/-<br>3) 2190000/- |
| 2 | ಮೈಸೂರು ವಿಭಾಗ | 1. ಹನುಮಂತರಾಯಪ್ಪ ಅಸೋಸಿಯೇಟ್ಸ್,<br>2. ಕೆ.ಆರ್.ವಿ & ಕಂಪೆನಿ<br>3. ಎನ್.ಎನ್. ಆರ್. & ಕಂಪೆನಿ ಚಾರ್ಟೆಡ್ ಅಕೌಂಟೆಂಟ್ | 1) 5400/-<br>2. 6350-/<br>3. 15000/- | 136 | 1) 734400/-<br>2) 863600-/<br>3) 2040000/- |
| 3 | ಬೆಳಗಾವಿ ವಿಭಾಗ | 1. ಎನ್.ಎನ್. ಆರ್. & ಕಂಪೆನಿ ಚಾರ್ಟೆಡ್ ಅಕೌಂಟೆಂಟ್ | 15000/- | 131 | 1965000/- |
| 4 | ಕಲಬುರ್ಗಿ ವಿಭಾಗ | 1.ಎನ್.ಎನ್. ಆರ್. & ಕಂಪೆನಿ ಚಾರ್ಟೆಡ್ ಅಕೌಂಟೆಂಟ್ | 15000/- | 141 | 2115000/- |

ನಾಲ್ಕು ವಿಭಾಗಗಳಿಗೆ ಎಲ್-1 ಸಂಸ್ಥೆಗಳು ನಮೂದಿಸಿದ ದರಗಳನ್ನು ಪರಿಶೀಲಿಸಲಾಗಿ, ವಾರ್ಷಿಕವಾಗಿ 56.03 ಲಕ್ಷಗಳನ್ನು ವೆಚ್ಚವನ್ನು ಭರಿಸಬೇಕಾಗುತ್ತದೆ. ಸಂಘದ ಅಧೀನದ ವಸತಿ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶಾಲೆಗಳ ಕಳೆದ 5 ವರ್ಷಗಳ ಲೆಕ್ಕ ಪರಿಶೋಧನೆ ಬಾಕಿ ಇರುತ್ತವೆ. ಈ ಹಿನ್ನೆಲೆಯಲ್ಲಿ ಐದು ವರ್ಷಗಳ ಲೆಕ್ಕ ಪರಿಶೋಧನೆಗೆ ಮೇಲಿನ ದರದಂತೆ ರೂ. 280.15 ಲಕ್ಷಗಳ ವೆಚ್ಚವನ್ನು ಭರಿಸಬೇಕಾಗುತ್ತದೆ ಹಾಗೂ ವೆಚ್ಚದ ಪ್ರಮಾಣವು ಕೆ.ಟಿ.ಪಿ.ಪಿ. ಅಧಿನಿಯಮಕ್ಕೆ ಒಳಪಡುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ, ವಸತಿ ಶಾಲೆ /ಕಾಲೇಜುಗಳ ಆಂತರಿಕ ಲೆಕ್ಕ ಪರಿಶೋಧನೆಗೆ ಚಾರ್ಟೆಡ್ ಅಕೌಂಟೆಂಟ್‌ರರುಗಳ ಬದಲಾಗಿ(Karnataka Institute of Public Auditors) KIPA ಸಂಸ್ಥೆಯಿಂದ 20 ನಿವೃತ್ತ ಲೆಕ್ಕ ಪರಿಶೋಧನಾಧಿಕಾರಿಗಳನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿದೆ. ಪ್ರತಿ ಲೆಕ್ಕ ಪರಿಶೋಧಕರಿಗೆ ಮಾಸಿಕ ರೂ. 20000/- ದಂತೆ ವೇತನ ಪಾವತಿಸಿದಲ್ಲಿ ಮಾಸಿಕ ರೂ. 4.00 ಲಕ್ಷಗಳ ವೆಚ್ಚ ಭರಿಸಬೇಕಾಗಿದ್ದು, ವಾರ್ಷಿಕವಾಗಿ ರೂ. 48.00 ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ. ಅಲ್ಲದೆ ಇವರುಗಳಿಗೆ ಪ್ರವಾಸ ಭತ್ಯೆ ಅಂದರೆ ರೂ.10.00 ರಿಂದ 12.00 ಲಕ್ಷಗಳನ್ನು ಪಾವತಿಸಿದಲ್ಲಿ ವಾರ್ಷಿಕ ವೆಚ್ಚ ರೂ. 60.00 ಲಕ್ಷಗಳಾಗುತ್ತವೆ. ಇವರಗಳನ್ನು ನೇಮಕ ಮಾಡಿಕೊಳ್ಳುವುದರಿಂದ 5 ವರ್ಷಗಳ ಲೆಕ್ಕ ಪರಿಶೋಧನೆ ಪೂರ್ಣಗೊಳ್ಳವುದರ ಜೊತೆಗೆ ಸಂಘಕ್ಕೆ ಉಳಿತಾಯವಾಗುತ್ತದೆ. ತುಲನಾತ್ಮಕ ವಿವರಗಳು ಈ ಕೆಳಕಂಡಂತಿವೆ.

| ಚಾರ್ಟೆಡ್ ಅಕೌಂಟೆಂಟ್‌ಗಳ ಸೇವೆಗೆ ಭರಿಸಬೇಕಾದ ವೆಚ್ಚದ ವಿವರಗಳು | | KIPA ಸಂಸ್ಥೆಯಿಂದ ನಿವೃತ್ತ ಸಿಬ್ಬಂದಿಗಳನ್ನು ಪಡೆಯಲು ಭರಿಸಬೇಕಾದ ವೆಚ್ಚ |
|---|---|---|
| ಒಂದು ವರ್ಷಕ್ಕೆ | ಐದು ವರ್ಷಕ್ಕೆ | |
| ರೂ.56.00 ಲಕ್ಷಗಳು | ರೂ.280.00 ಲಕ್ಷಗಳು | ರೂ.60.00 ಲಕ್ಷಗಳು (5 ವರ್ಷದ ಲೆಕ್ಕ ಪರಿಶೋಧನೆಗೆ) |

ಮುಂದುವರೆದು ತದನಂತರದ ವರ್ಷಗಳಲ್ಲಿ ಲೆಕ್ಕ ಪರಿಶೋಧನೆಯ ಅಗತ್ಯತೆಯನ್ನು ಮನಗಂಡು ಮೇಲಿನ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿಮೆಗೊಳಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ KIPA ಸಂಸ್ಥೆಯಿಂದ 20 ಲೆಕ್ಕ ಪರಿಶೋಧಕರುಗಳನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳುವ ತೀರ್ಮಾನ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿಯಮಾನುಸಾರ ಟೆಂಡರ್ ಕರೆದು, ಚಾರ್ಟಡ್ ಅಕೌಂಟೆಂಟ್‌ರವರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 11**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ ಕಾಲೇಜುಗಳ ಖಾಯಂ ಸಿಬ್ಬಂದಿಗಳಿಗೆ ಜನವರಿ 2015 ರಿಂದ ಮಂಜೂರಾದ ತುಟ್ಟಿಭತ್ಯೆಯನ್ನು ನೀಡುವ ಬಗ್ಗೆ :**

ಕರ್ನಾಟಕ ರಾಜ್ಯ ಸರ್ಕಾರವು ತನ್ನ ಖಾಯಂ ನೌಕರರುಗಳಿಗೆ ನೀಡುತ್ತಿದ್ದ ತುಟ್ಟಿಭತ್ಯೆಯನ್ನು ಶೇ.25.25 ನ್ನು ಶೇ.28.75ಕ್ಕೆ ಹೆಚ್ಚಿಸಿ, ಸರ್ಕಾರದ ಆದೇಶ ಕ್ರಮಸಂಖ್ಯೆ: FD 11 SRP 2015

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ದಿನಾಂಕ : 24.4.2015 ರಲ್ಲಿ ಆದೇಶಿಸಿದೆ. ತುಟ್ಟಿ ಭತ್ಯೆಯ ಹೆಚ್ಚಳವನ್ನು ದಿನಾಂಕ 01.01.2015 ರಿಂದ ಪಾವತಿಸಲು ಆದೇಶಿಸಲಾಗಿದೆ. ತುಟ್ಟಿ ಭತ್ಯೆಯ ಹೆಚ್ಚಳ ಶೇ.3.5 ರಷ್ಟನ್ನು ಸಂಘದ 3652 ಖಾಯಂ ಸಿಬ್ಬಂದಿಗಳಿಗೆ ದಿನಾಂಕ 01.01.2015 ರಿಂದ ಜೂನ್ -2015 ರವರೆಗೆ ಬಾಕಿ ತುಟ್ಟಿ ಭತ್ಯೆ ಪಾವತಿಸಿದೆ. ಜುಲೈ-2015ರ ಮಾಹೆಯಿಂದ ವೇತನದೊಂದಿಗೆ ತುಟ್ಟಿಭತ್ಯೆಯ ಹೆಚ್ಚಳವನ್ನು ಸೇರಿಸಿ ಪಾವತಿಸಲಾಗುತ್ತಿದೆ. ತುಟ್ಟಿಭತ್ಯೆದ ಹೆಚ್ಚಳದಿಂದಾಗಿ ವಾರ್ಷಿಕವಾಗಿ ಅಂದಾಜು ರೂ. 276.98 ಲಕ್ಷಗಳ ವೆಚ್ಚವನ್ನು ಭರಿಸಬೇಕಾಗಿದ್ದು, ಈ ವೆಚ್ಚವನ್ನು ವಸತಿ ಶಾಲೆಗಳ ನಿರ್ವಹಣಾ ಅನುದಾನದಲ್ಲಿ ಭರಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ತುಟ್ಟಿ ಭತ್ಯೆ ಹೆಚ್ಚಳವನ್ನು ಪಾವತಿಸಿದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಸರ್ಕಾರ ಮಂಜೂರು ಮಾಡಿದ ತುಟ್ಟಿ ಭತ್ಯೆಯ ಹೆಚ್ಚಳ ಶೇ.3.5ರಷ್ಟನ್ನು ಸಂಘದ 3652 ಖಾಯಂ ಸಿಬ್ಬಂದಿಗಳಿಗೆ ದಿನಾಂಕ:01-01-2015 ರಿಂದ ವಿಸ್ತರಿಸಿರುವುದನ್ನು ಅನಮೋದಿಸಿತು.**

**ವಿಷಯ ಸಂಖ್ಯೆ:12**

**ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆ (NPS) ಅಳವಡಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಖಾಯಂ ಸಿಬ್ಬಂದಿಗಳಿಗೆ ಈ ಕೆಳಕಂಡ ನಿವೃತ್ತಿ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲಾಗಿದೆ.

1. ಕಾರ್ಮಿಕ ಭವಿಷ್ಯ ನಿಧಿ (Employees Provident Fund)
2. ಸಮೂಹ ಉಪದಾನ (Group Gratuity)
3. ಗುಂಪು ವಿಮೆ (GIS)
4. ಗಳಿಕೆ ರಜೆ ನಗದೀಕರಣ

ಆರ್ಥಿಕ ಇಲಾಖೆಯ ಸುತ್ತೋಲೆ ಕ್ರ.ಸಂ. FD(Spl) 2009-10 PEN 2012 dated 21.02.2015 ರನ್ವಯ ಸರ್ಕಾರ ಸ್ವಾಮ್ಯದ ನಿಯಮ/ಮಂಡಳಿ/ವಿಶ್ವ ವಿದ್ಯಾನಿಲಯ ಸಂಘ ಸಂಸ್ಥೆಗಳಲ್ಲಿ ದಿ:01.04.2006ರ ನಂತರ ನೇಮಕಾತಿ ಮಾಡಿಕೊಳ್ಳಲಾದ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿದೆ. ಹಾಗೂ ಹಾಲಿ ಇರುವ ನಿವೃತ್ತಿ ಸೌಲಭ್ಯವನ್ನು ಕೈಬಿಡುವಂತೆ ತಿಳಿಸಿರುತ್ತಾರೆ.

ಸಂಘದಲ್ಲಿ ಪ್ರಸ್ತುತ 3672 ಖಾಯಂ ಸಿಬ್ಬಂದಿಗಳ ಪೈಕಿ 436 ಬೋಧಕ ಸಿಬ್ಬಂದಿಗಳು ದಿ:01.10.2011 ರಿಂದ ಜಾರಿಗೆ ಬರುವಂತೆ ಖಾಯಂಗೊಂಡಿರುತ್ತಾರೆ, ಬಾಕಿ ಉಳಿದ ಖಾಯಂ ಸಿಬ್ಬಂದಿಗಳನ್ನು ಜೂನ್-2012ರಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ಮುಂದುವರೆದು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಈ ಸುತ್ತೋಲೆಯಲ್ಲಿ ನೂತನ ಪಿಂಚಣಿ ಯೋಜನೆಯನ್ನು ತನ್ನದೇ ಆದ ಸಂಪನ್ಮೂಲಗಳಿಂದ ಭರಿಸಬೇಕೆಂದು ಸೂಚಿಸಿದೆ.

ಸಂಘದ ಹಾಗೂ ಅಧೀನ ವಸತಿ ಶಾಲೆಗಳ ನಿರ್ವಹಣೆ, ಕಟ್ಟಡ ನಿರ್ಮಾಣಕ್ಕೆ ಮತ್ತು ಸಂಘದ ಇತರೇ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತಿದ್ದು, ಸಂಘವು ತನ್ನದೇ ಆದ ಯಾವುದೇ ಸಂಪನ್ಮೂಲವನ್ನು ಹೊಂದಿರುವುದಿಲ್ಲ. ಪ್ರಸ್ತುತ ಸಂಘದ ಅಧೀನದ ವಸತಿ ಶಾಲೆಗಳಲ್ಲಿ 3672 ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ನೂತನ ಪಿಂಚಣಿ ಯೋಜನೆಯಂತೆ, ನೌಕರರುಗಳ ಮೂಲವೇತನ ಮತ್ತು ತುಟ್ಟಿ ಭತ್ಯೆಯ ಮೇಲೆ ಶೇ.10 ರಷ್ಟು ವಂತಿಕೆಯನ್ನು ಸಂಘವು ಭರಿಸಬೇಕಾಗಿದ್ದು, ಖಾಯಂ ಸಿಬ್ಬಂದಿಗಳಿಗೆ NPS ಯೋಜನೆಯನ್ನು ಅಳವಡಿಸಿಕೊಳ್ಳಲು ಸಂಘಕ್ಕೆ ವಾರ್ಷಿಕವಾಗಿ ಶೇ.2813.38 ಲಕ್ಷ ಅಂದಾಜು ವೆಚ್ಚ ಭರಿಸಬೇಕಾಗಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಸಂಘದ ಖಾಯಂ ಸಿಬ್ಬಂದಿಗಳಿಗೆ NPS ಅಳವಡಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ಯೋಜನೆಯನ್ನು ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಹೊರಡಿಸಲಾಗುವ ಸರ್ಕಾರದ ಆದೇಶದನ್ವಯ ಅನುಷ್ಠಾನಗೊಳಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಕರ್ನಾಟಕ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಖಾಯಂ ಸಿಬ್ಬಂದಿಗಳಿಗೆ ಅಳವಡಿಸಿಕೊಂಡ 1) ಕಾರ್ಮಿಕ ಭವಿಷ್ಯ ನಿಧಿ 2) ಸಮೂಹ ಉಪಧಾನ 3) ಗುಂಪು ವಿಮೆ ಇವುಗಳ ಬದಲಾಗಿ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಅನುಮೋದಿಸಿತು. ಈ ಯೋಜನೆಯನ್ನು ಅಳವಡಿಸಿಕೊಳ್ಳುವ ಮುನ್ನಾ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ, ಸಚಿವ ಸಂಪುಟ ಸಭೆಯ ಅನುಮೋದನೆ ಪಡೆಯಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 13

ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ವಸತಿ ಶಾಲೆಗಳಿಗೆ ನೇರ ನೇಮಕಾತಿ ಹೊಂದಿದ ಖಾಯಂ ಸ್ಟಾಫ್ ನರ್ಸ್ ವೇತನ ತಾರತಮ್ಯ ಸರಿಪಡಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011ರಲ್ಲಿ ವಸತಿ ಶಾಲೆಯ ಸ್ಟಾಫ್ ನರ್ಸ್ ಹುದ್ದೆಗಳಿಗೆ ಈ ಕೆಳಕಂಡಂತೆ ವಿದ್ಯಾರ್ಹತೆ ಮತ್ತು ವೇತನ ಶ್ರೇಣಿಯನ್ನು ನಿಗದಿಪಡಿಸಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

Must have passed B.Sc nursing degree examination from an institution recognized by Indian Nursing Council.

**Or**

Must have passed SSLC or equivalent Examination and GNM Course comprising 3 years General Nursing and 6 months midwifery from a Institution recognized by an institution recognized by Indian Nursing Council/ Karnataka Nursing Council.

(2) Candidate must have studied Kannada as one of the languages either in the qualifying examinations or Degree or Pre University Course or SSLC or holder of Diploma in Kannada or passed Kannada Certificate Course (Kava/Jana/Rathna) conducted by Karnataka secondary Education Examination Board/Kannada Sahitya Parishath Bangalore.

ಸ್ಟಾಫ್ ನರ್ಸ್‌ಗಳಿಗೆ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಅನ್ವಯ ನಿಗದಿಪಡಿಸಿದ ವೇತನ ಶ್ರೇಣಿ 16000-29600 (ಹಿಂದಿನ ವೇತನ ಶ್ರೇಣಿ ರೂ. 8000-16800)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸ್ಟಾಫ್ ನರ್ಸ್‌ಗೆ ನಿಗದಿಪಡಿಸಿದ ವಿದ್ಯಾರ್ಹತೆಯು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯು ಒಂದೇ ಆಗಿದೆ. ಆದರೆ, ವೇತನ ಶ್ರೇಣಿಯಲ್ಲಿ ವ್ಯತ್ಯಾಸ ಇರುತ್ತದೆ. ಈ ಹಿನ್ನಲೆಯಲ್ಲಿ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ

ಕಾರ್ಯನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್‌ಗಳಿಗೆ ನಿಗದಿಪಡಿಸಿದ ವೇತನ ಶ್ರೇಣಿ ಅಂದರೆ, ರೂ. 17650-32000ಗಳನ್ನು ನಿಗದಿಪಡಿಸಲು ಕೋರಿರುತ್ತಾರೆ. ಈ ವೇತನ ಶ್ರೇಣಿಯನ್ನು ಅಳವಡಿಸಿಕೊಂಡಾಗ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ 217 ಸ್ಟಾಫ್ ನರ್ಸ್‌ಗಳಿಗೆ ವಾರ್ಷಿಕವಾಗಿ ರೂ.59.61 ಲಕ್ಷಗಳ ಹೆಚ್ಚುವರಿ ವೆಚ್ಚವನ್ನು ಭರಿಸಬೇಕಾಗುತ್ತದೆ. ವಿವರಗಳು ಈ ಕೆಳಕಂಡಂತೆ ಇವೆ.

| ಪ್ರಸ್ತುತ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗಳ ಸಂಖ್ಯೆ | ಪ್ರತಿ ಸ್ಟಾಫ್ ನರ್ಸ್‌ಗೆ ಪ್ರತಿ ಮಾಹೆ ಪರಿಷ್ಕೃತ ವೇತನ ಶ್ರೇಣಿಯ ಮೂಲವೇತನ ಮತ್ತು ಪ್ರಸ್ತುತ ವೇತನ ಶ್ರೇಣಿಯ ಮೂಲ ವೇತನದ ವ್ಯತ್ಯಾಸ (ರೂ.17650-16000) | ಪ್ರತಿ ಸಿಬ್ಬಂದಿಗೆ ಚಾಲ್ತಿಯಲ್ಲಿರುವ ಮನೆ ಬಾಡಿಗೆ ಭತ್ಯೆ ಮತ್ತು ತುಟ್ಟಿ ಭತ್ಯೆ @ ಶೇ. 38.75 ರಂತೆ | ಒಟ್ಟು | ಖಾಯಂ ಸ್ಟಾಫ್ ನರ್ಸ್‌ಗಳಿಗೆ ವಾರ್ಷಿಕವಾಗಿ ಭರಿಸಬೇಕಾದ ವೆಚ್ಚ |
|---|---|---|---|---|
| 217 | 1650 | 639.38 | 2289.00 | 59.61 ಲಕ್ಷಗಳು |

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಖಾಯಂ ಸ್ಟಾಫ್ ನರ್ಸ್ ವೇತನ ಶ್ರೇಣಿಯನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಹಾಲಿ ನಿಗದಿಪಡಿಸಿರುವ ವೇತನ ಶ್ರೇಣಿ ರೂ. 16000-29600 ರ ಬದಲಾಗಿ ರೂ. 17650-32000ಗಳಿಗೆ ನಿಗದಿಪಡಿಸಲು ಅನುಮೋದನೆ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಅನುಮೋದಿಸಿದಲ್ಲಿ ಹೆಚ್ಚುವರಿ ವೆಚ್ಚ ರೂ.59.61 ಲಕ್ಷಗಳನ್ನು ವಸತಿ ಶಾಲೆಗಳ ನಿರ್ವಹಣಾ ಅನುದಾನದಲ್ಲಿ ಭರಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿ ಮಂಡಿಸಿ, ಅನುಮೋದಿಸಿದಲ್ಲಿ, ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು 2011ಕ್ಕೆ ಸರ್ಕಾರದಿಂದ ತಿದ್ದುಪಡಿ ಆದೇಶ ಹೊರಡಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಕರ್ನಾಟಕ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಸ್ಟಾಫ್ ನರ್ಸ್ ಹುದ್ದೆಗೆ ನಿಗಧಿಪಡಿಸಿದ ವೇತನ ಶ್ರೇಣಿಯ ಹುದ್ದೆಯ ಕಾರ್ಯ ಒತ್ತಡವನ್ನು ಪರಿಗಣಿಸಿ ನಿಗಧಿಯಾಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್ ವೇತನ ಶ್ರೇಣಿಯು ಆ ಇಲಾಖೆಯ ಕಾರ್ಯದ ಒತ್ತಡವನ್ನು ಅವಲಂಬಿಸಿರುವುದನ್ನು ಮನಗಂಡು, ಸಂಘವು ಈಗಾಗಲೇ ಅಳವಡಿಸಿಕೊಂಡಿರುವ ವೇತನ ಶ್ರೇಣಿಯನ್ನೇ ಮುಂದುವರಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 14**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತಂದು ಖಾಯಂಗೊಳಿಸುವ ಬಗ್ಗೆ.**

******

ಸಂಘದ ಕೇಂದ್ರ ಕಛೇರಿಯಲ್ಲಿ ಕಾರ್ಯ ಒತ್ತಡವು ಹೆಚ್ಚಾಗಿದ್ದರಿಂದ ಈ ಕೆಳಕಂಡ ಹುದ್ದೆಗಳು ಅಗತ್ಯವಾಗಿದ್ದು, ಅವುಗಳಲ್ಲಿ ಕೆಲವು ಹುದ್ದೆಗಳಿಗೆ ಕಾರ್ಯನಿರ್ವಾಹಕ ನಿರ್ದೇಶಕರೇ ನೇರವಾಗಿ ಆಯ್ಕೆ ಮಾಡಿಕೊಂಡಿದ್ದು ನಂತರ ಅಗತ್ಯಕ್ಕೆ ಅನುಗುಣವಾಗಿ ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳಲಾಗುತ್ತಿದೆ.

| | | |
|---|---|---|
| ➢ ಶೀಘ್ರಲಿಪಿಗಾರರು | : | 01 |
| ➢ ಪ್ರಥಮ ದರ್ಜೆ ಸಹಾಯಕರು | : | 04 |
| ➢ ಲೆಕ್ಕ ಸಹಾಯಕರು | : | 03 |
| ➢ ದ್ವಿತೀಯ ದರ್ಜೆ ಸಹಾಯಕರು | : | 02 |
| ➢ ಗಣಕಯಂತ್ರ ಸಹಾಯಕರು | : | 06 |
| ➢ ಕಿರಿಯ ಅಭಿಯಂತರರು | : | 04 |
| ➢ ವಾಹನ ಚಾಲಕರು | : | 03 |
| ➢ ದಲಾಯತರು | : | 04 |
| | | 27 |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸರ್ಕಾರವು ಮಂಜೂರು ಮಾಡಿದಾಗ ಮಂಜೂರಾತಿ ಆದೇಶದಲ್ಲಿ 4 – ಪ್ರೋಗ್ರಾಮ್ ಎಕ್ಸಿಕ್ಯೂಟಿವ್, 2 ದಲಾಯತ್, 2 ವಾಹನ ಚಾಲಕರ ಹುದ್ದೆಗಳನ್ನು ಸೃಜಿಸಲಾಗಿದೆ. ಸಂಘವನ್ನು ಮಂಜೂರು ಮಾಡಿದಾಗ ಕೇವಲ 79 ವಸತಿ ಶಾಲೆಗಳು ಸಂಘದಡಿ ಕಾರ್ಯನಿರ್ವಹಿಸುತ್ತಿದ್ದು, ಸಂಘದ ಕಾರ್ಯ ಚಟುವಟಿಕೆ ಕಟ್ಟಡದ ನಿರ್ಮಾಣಕ್ಕೆ ಮತ್ತು ವಸತಿ ಶಾಲೆಗಳ ಉಸ್ತುವಾರಿಗೆ ಸೀಮಿತಗೊಂಡಿತ್ತು. ಪ್ರಸ್ತುತ 506 ವಸತಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಗಳಲ್ಲಿ ಪ್ರಸ್ತುತ 3672 ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಈ ವಸತಿ ಶಾಲೆಗಳಲ್ಲಿ 1,10,000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದರಿಂದ ಕೇಂದ್ರ ಕಛೇರಿಯ ಕೆಲಸದ ಒತ್ತಡ ಹೆಚ್ಚಾಗಿದ್ದುದ್ದರಿಂದ ಕಛೇರಿಯ ಕೆಲಸಗಳು ಸುಗಮವಾಗಿ ನಡೆಯುವ ಹಿತದೃಷ್ಟಿಯಿಂದ, ಈ ರೀತಿ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳು 5 ರಿಂದ 10 ವರ್ಷಗಳಿಗೂ ಮೇಲ್ಪಟ್ಟು ಸಂಘದ ಸೇವೆಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಇವರುಗಳು ಆಗಿಂದ್ದಾಗ್ಗೆ ಸರ್ಕಾರಕ್ಕೆ ನೌಕರಿಯನ್ನು ಖಾಯಂಗೊಳಿಸುವಂತೆ ಮನವಿಗಳನ್ನು ಸಲ್ಲಿಸಿದ್ದಾರೆ.

ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಸಂಘದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಸೂಕ್ತ ತಿದ್ದುಪಡಿ ತಂದು ವಿಲೀನಗೊಳಿಸಲು ಕ್ರಮವಹಿಸುವಂತೆ, ಮಾನ್ಯ ಶಾಸಕರುಗಳು ಸರ್ಕಾರಕ್ಕೆ ಪತ್ರ ಸಲ್ಲಿಸಿದ್ದು, ಸರ್ಕಾರವು ಪರಿಶೀಲಿಸಿ, ಕಡತ ಮಂಡಿಸಲು ಸಂಘಕ್ಕೆ ಸೂಚಿರುತ್ತಾರೆ

ಸದರಿ ಹೊರಸಂಪನ್ಮೂಲ ಸಿಬ್ಬಂದಿಗಳು ಕಳೆದ 5–12 ವರ್ಷಗಳಿಂದ ತೃಪ್ತಿಕರವಾಗಿ ಸೇವೆ ಸಲ್ಲಿಸುತ್ತಿದ್ದು, ಮಾನವೀಯತೆ ದೃಷ್ಟಿಯಿಂದ ಖಾಯಂಗೊಳ್ಳಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಕೇಂದ್ರ ಕಛೇರಿಯ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಅನ್ವಯವಾಗುವಂತೆ, ಮಾನದಂಡಗಳನ್ನು ಅಳವಡಿಸಿಕೊಳ್ಳಲು ಅಥವಾ ವಿಶೇಷ ವಿನಿಯಮಗಳನ್ನು ರೂಪಿಸಿ, ಇವರ ಸೇವೆಗಳನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ, ಒಂದು ಬಾರಿಗೆ ಮಾತ್ರ ವಿಲೀನಗೊಳಿಸುವ ಬಗ್ಗೆ ಆಡಳಿತ ಮಂಡಳಿಗೆ ವಿಷಯ ಮಂಡಿಸಿ ತೀರ್ಮಾನ ಕೋರಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿ ಸಭೆಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಕೇಂದ್ರ ಕಛೇರಿಗೆ ಅಗತ್ಯವಿರುವ ಹುದ್ದೆಗಳನ್ನು ಮಂಜೂರು ಮಾಡಿಸಿಕೊಂಡ ನಂತರ ಖಾಯಂ ಆಗಿ ಭರ್ತಿ ಮಾಡಿಕೊಳ್ಳುವ ಮುನ್ನಾ, ವಿಷಯದಲ್ಲಿ ಹೇಳಲಾದ 27 ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಆಧ್ಯತೆ ಮೇಲೆ ಪರಿಗಣಿಸುವ ಬಗ್ಗೆ ಸೂಕ್ತ ವಿಶೇಷ ವಿನಿಯಮಗಳನ್ನು (Special Regulations) ರೂಪಿಸಲು ಕ್ರಮವಹಿಸುವಂತೆ ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ: 15

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ ಹಾಗೂ ಮೊರಾರ್ಜಿ ದೇಸಾಯಿ/ಏಕಲವ್ಯ ಮಾದರಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್ "ಎ", "ಬಿ" ಮತ್ತು "ಸಿ" ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಿಕೊಳ್ಳುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ 505 ವಸತಿ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಈ ಕೆಳಕಂಡ ವೃಂದವಾರು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳು ಖಾಲಿಯಿದೆ. -

| ವೃಂದದ ವಿವರ | ಖಾಲಿ ಹುದ್ದೆಗಳ ಸಂಖ್ಯೆ |
|---|---|
| ವೃಂದ 'ಎ' ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರು | 30 |
| ವೃಂದ 'ಬಿ' ಮೊರಾರ್ಜಿ ದೇಸಾಯಿ/ಏಕಲವ್ಯ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಪ್ರಾಂಶುಪಾಲರು/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯ ಉಪಪ್ರಾಂಶುಪಾಲರು/ ಪದವಿ ಪೂರ್ವ ವಿಜ್ಞಾನ ವಸತಿ ಕಾಲೇಜುಗಳ ಉಪನ್ಯಾಸಕರು | 366 |
| ವೃಂದ 'ಸಿ' ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಮೊರಾರ್ಜಿ ದೇಸಾಯಿ/ಏಕಲವ್ಯ ಮಾದರಿ ಪದವಿ ಪೂರ್ವ ವಿಜ್ಞಾನ ವಸತಿ ಕಾಲೇಜುಗಳ ಶಿಕ್ಷಕೇತರ ಹುದ್ದೆಗಳಾದ ಪ್ರಥಮ ದರ್ಜೆ ಸಹಾಯಕರು, ಶುಶ್ರೂಷಕರು, ವಾರ್ಡನ್, ದ್ವಿತೀಯ ದರ್ಜೆ ಸಹಾಯಕರು. | 2045 |
| ಒಟ್ಟು | 2439 |

ಖಾಲಿ ಇರುವ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕ ಮಾಡಿಕೊಳ್ಳಲು ಉದ್ದೇಶಿಸಿದೆ. ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಗೆ (ಸ್ಟಾಫ್‌ನರ್ಸ್ ಹೊರತುಪಡಿಸಿ) ಆಯ್ಕೆ ಪರೀಕ್ಷೆ ಮುಖಾಂತರ ಸಂದರ್ಶನ ನಡೆಸದೇ ನೇಮಕಾತಿ ಮಾಡಿಕೊಳ್ಳಲು ನಿಯಮವನ್ನು ಅಳವಡಿಸಿಕೊಳ್ಳಲಾಗಿದೆ. ಸಂಘವು ಈ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮುಖಾಂತರ ಆಯ್ಕೆ ಪರೀಕ್ಷೆ ನಡೆಸಿ ಸಂದರ್ಶನ ಮುಖಾಂತರ ಆಯ್ಕೆ ಮಾಡಿಕೊಳ್ಳಲು ಉದ್ದೇಶಿಸಿ, ಸಂಘದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತರಲು ಕ್ರಮ ವಹಿಸಿದೆ. ಪ್ರಸ್ತುತ ಸಂಘದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ (Combined Competetive Examinations) ಶೇ.70ರಷ್ಟು ಅಂಕಗಳನ್ನು; ನಿಗದಿತ ಪದವಿಗೆ ಶೇ.20 ರಷ್ಟು ಅಂಕಗಳನ್ನು ಮತ್ತು ಬಿ.ಇಡಿ/ ಬಿ.ಪಿ.ಎಡ್ ಸಹ ಪದವಿಗೆ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶೇ.10 ಅಂಕಗಳನ್ನು ನಿಗದಿಗೊಳಿಸಲಾಗಿದೆ. ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ನಿಗದಿಪಡಿಸಿದ ಶೇ.70 ರಲ್ಲಿ ಶೇ.57.5 ರಷ್ಟು ಆಯ್ಕೆ ಪರೀಕ್ಷೆಗೂ ಹಾಗೂ ಶೇ.12.5 ರಷ್ಟು ಸಂದರ್ಶನಕ್ಕೂ ನಿಗದಿಪಡಿಸಲು, ಸಂಘದ ವೃಂದ ಮತ್ತು ವಿನಿಯಮಗಳಿಗೆ ತಿದ್ದುಪಡಿ ತರಲು ಕರಡು ತಿದ್ದುಪಡಿ ಅಧಿಸೂಚನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ.

ಮೇಲ್ಕಂಡ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಕೆಳಕಂಡ ಈ ಅಂಶಗಳ ಮೇಲೆ ಅನುಮೋದನೆ ಕೋರಿದೆ.

1. ಖಾಲಿ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ನೇಮಕ ಮಾಡಿಕೊಳ್ಳಲು ಅನುಮೋದನೆ
2. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ವಿಷಯದಲ್ಲಿ ಪ್ರಸ್ತಾಪಿಸಿದಂತೆ, ಸಂದರ್ಶನದ ಮುಖಾಂತರ ಆಯ್ಕೆ ಮಾಡಿಕೊಳ್ಳಲು ತಿದ್ದುಪಡಿ ತರಲು ಸಂಘವು ಕ್ರಮವಹಿಸಿದ ಬಗ್ಗೆ ಅನುಮೋದನೆ

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿತು. ಮಾನ್ಯ ಉಚ್ಛ ನ್ಯಾಯಾಲಯದ ತೀರ್ಮಾನದಂತೆ, ಹೊರಸಂಪನ್ಮೂಲ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಸಂವಿಧಾನದ ಅನುಚ್ಛೇದ 371 (ಜೆ)ರ ಅನ್ವಯ ಸರ್ಕಾರವು ಹೊರಡಿಸಿದ ಅಧಿಸೂಚನೆಯಂತೆ ಹುದ್ದೆಗಳನ್ನು ವರ್ಗೀಕರಿಸಿ, ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ವಹಿಸುವಂತೆ ತೀರ್ಮಾನಿಸಿತು**

ವಿಷಯ ಸಂಖ್ಯೆ: 15A

ಮಾಹಿತಿ ಹಾಗೂ ಅಂಕಿಅಂಶ ಶಾಖೆಯನ್ನು ಸೃಜಿಸಿರುವ ಬಗ್ಗೆ.

ಕೇಂದ್ರ ಕಛೇರಿಯ ಕಂಪ್ಯೂಟರ್ ಶಾಖೆಯನ್ನು ಮಾಹಿತಿ ಹಾಗೂ ಅಂಕಿಅಂಶ ಶಾಖೆಯಾಗಿ ಸಂಘದ ಅಧಿಕೃತ ಅಧಿಕಾರಿ/ ಸಿಬ್ಬಂದಿಗಳ ಕಾರ್ಯಸೂಚಿ ಸಂಖ್ಯೆ: ಕವಶಿಸಸ/ಆಡಳಿತ(1)/ಸಿಆರ್19/2015-16, ದಿನಾಂಕ: 22.07.2015 ರಲ್ಲಿ ಅನುಮೋದಿಸಲಾಗಿದೆ. ಅದರಂತೆ ಹೊಸದಾಗಿ ಸೃಜಿಸಿರುವ ಮಾಹಿತಿ ಹಾಗೂ ಅಂಕಿಅಂಶ ಶಾಖೆಗೆ ವ್ಯವಸ್ಥಾಪಕರು (ಮಾಹಿತಿ ಮತ್ತು ಅಂಕಿಅಂಶ)-1, ಶಾಖಾ ಮುಖ್ಯಸ್ಥರಾಗಿರುತ್ತಾರೆ. ಅವರ ಅಡಿಯಲ್ಲಿ ಸೀನಿಯರ್

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪ್ರೋಗ್ರಾಮರ್– 1, ಪ್ರೋಗ್ರಾಮರ್–3, ಮತ್ತು ಅಂಕಿಅಂಶ ಸಹಾಯಕರು–1 ಸೇರಿದಂತೆ ಒಟ್ಟು 6 ಸಿಬ್ಬಂದಿಗಳ ಅವಶ್ಯಕತೆಯಿದ್ದು ಈ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಶಾಖೆಯನ್ನು ಬಲಪಡಿಸುವುದರಿಂದ ಆಡಳಿತಾತ್ಮಕ ಸುಧಾರಣೆಯಾಗುತ್ತದೆ.

ಪ್ರಸ್ತುತ ಈ ಶಾಖೆಯಲ್ಲಿ ಪ್ರೋಗ್ರಾಮರ್‌ಗಳಾಗಿ ನಿಯೋಜಿತ ಕಂಪ್ಯೂಟರ್ ಶಿಕ್ಷಕರಾದ ಸುನೀಲ್ ಸಿ.ಎಸ್ ಮತ್ತು ಸಂತೋಷ್ ಏಳೆಮ್ಮಿ, ಹಾಗೂ ಹೊರಸಂಪನ್ಮೂಲ ಸಿಬ್ಬಂದಿಯಾದ ಪಂಚಾಲ ಕೃಷ್ಣರವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ (ಕಾರ್ಯಸೂಚಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

ಆದ್ದರಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಮಾಹಿತಿ ಹಾಗೂ ಅಂಕಿಅಂಶ ಶಾಖೆಯನ್ನು ಆರಂಭಿಸುವುದರೊಂದಿಗೆ ಮೇಲಿನ ಹುದ್ದೆಗಳನ್ನು ಸೃಜಿಸಲು ಮಂಡಳಿಯ ಅನುಮೋದನೆಯನ್ನು ಕೋರಿದೆ.

**ತೀರ್ಮಾನ:**

**ಸಮಯದ ಅಭಾವದಿಂದ ವಿಷಯದ ಬಗ್ಗೆ ಚರ್ಚೆಯಾಗದೇ ಮುಂದೂಡಲಾಯಿತು.**

**ವಿಷಯ ಸಂಖ್ಯೆ: 15B**

**ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೃತ ಕುಟುಂಬದ ಸದಸ್ಯರುಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಗಳ ಖಾಯಂ ಸಿಬ್ಬಂದಿಗಳ ಪೈಕಿ 13 ಪ್ರಾಂಶುಪಾಲರು/ ಶಿಕ್ಷಕರು/ ಶುಶ್ರೂಷಕರು ಸೇವಾವಧಿಯಲ್ಲಿ ಮೃತ ಪಟ್ಟಿರುತ್ತಾರೆ. ಕರ್ನಾಟಕ ವೃಂದ ಮತ್ತು ನೇಮಕಾತಿ ನಿಯಮ 2011 ರ ನಿಯಮ –3 ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮ 1978 (Act)ರಡಿ ರಚಿಸಬಹುದಾದ / ರಚಿಸಲಾದ ವಿನಿಯಮಗಳನ್ನು (Rules)ಗಳನ್ನು ಅಳವಡಿಸಿಕೊಳ್ಳಲಾಗಿದೆ. ಕರ್ನಾಟಕ ಸೇವಾ ನಿಯಮದಡಿಯಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ನಿಯಮವನ್ನು 1996 ರಲ್ಲಿ ರಚಿಸಲಾಗಿದೆ. ಆದುದರಿಂದ ಸಂಘದ ಖಾಯಂ ನೌಕರರ ಮೃತ ಕುಟುಂಬಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಕ್ರಮ ವಹಿಸಿದೆ.

ಸಂಘದ ಅಧೀನದಲ್ಲಿ ಮೃತಪಟ್ಟ ಹದಿಮೂರು(13) ಮೃತ ಕುಟುಂಬದ ಸದಸ್ಯರುಗಳ ಪೈಕಿ ಶ್ರೀಮತಿ.ಲತಾ ಕೋಂ.ದಿವಂಗತ.ಕುಮಾರಸ್ವಾಮಿರವರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಪದವಿ ಪೂರ್ವ ಕಾಲೇಜು, ದಾವಣಗೆರೆಗೆ ನೇಮಕಾತಿ ಮಾಡಿ ದಿನಾಂಕ 21.01.2013 ರಂದು ಆದೇಶಿಸಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೇಲೆ ಹೇಳಿದ ಕುಟುಂಬದ ಸದಸ್ಯರಲ್ಲದೆ ಈ ಕೆಳಕಂಡ ಎರಡು ಮೃತ ಕುಟುಂಬದ ಸದಸ್ಯರುಗಳು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

1) ಶ್ರೀಮತಿ. ಶರಣಮ್ಮ ಕೋಂ.ದಿವಂಗತ. ಬಸಪ್ಪ, ಕನ್ನಡ ಭಾಷಾ ಶಿಕ್ಷಕರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೊಸರಕಲ್, ರಾಯಚೂರು ಜಿಲ್ಲೆ ಇವರು ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಗಣಕಯಂತ್ರ 1 ವರ್ಷದ ತರಬೇತಿ ಪಡೆದ ಬಗ್ಗೆ ದೃಢೀಕರಣ ನೀಡಿರುತ್ತಾರೆ.
2) ಶ್ರೀಮತಿ. ಶಕುಂತಲ ಕೋಂ.ದಿವಂಗತ. ಬಸವಲಿಂಗಪ್ಪ, ಗಣಿತ ಶಿಕ್ಷಕರು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ದೇವದುರ್ಗ, ರಾಯಚೂರು ಜಿಲ್ಲೆ ಇವರು ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಗಣಕಯಂತ್ರದ 6 ತಿಂಗಳ ತರಬೇತಿ ಪಡೆದ ಬಗ್ಗೆ ದೃಢೀಕರಣ ನೀಡಿರುತ್ತಾರೆ.

ಮೇಲೆ ಹೇಳಲಾದ ಇಬ್ಬರು ಮೃತ ಕುಟುಂಬದ ಸದಸ್ಯರು ಕರ್ನಾಟಕ ವಸತಿ ಶಿಕ್ಷಣ ವೃಂದ ಮತ್ತು ನೇಮಕಾತಿ ವಿನಿಯಮದ ಷೆಡ್ಯೂಲ್-1 ರ ಕ್ರ.ಸಂಖ್ಯೆ-19 ರಲ್ಲಿ ದ್ವಿತೀಯ ದರ್ಜೆ ಸಹಾಯಕರ ನೇಮಕಾತಿ ನಿಯಮಕ್ಕೆ ನಿಗದಿಪಡಿಸಿದ ಎಸ್.ಎಸ್.ಎಲ್.ಸಿ ಪರೀಕ್ಷೆ ಮತ್ತು 6 ತಿಂಗಳ ಗಣಕಯಂತ್ರ ಕೋರ್ಸನ್ನು ರಾಜ್ಯ ಸರ್ಕಾರದ ಅಥವಾ ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ತರಬೇತಿ ಪಡೆದಿರಬೇಕು ಎಂಬುದಾಗಿದೆ.

ಮೇಲೆ ಹೇಳಲಾದ ಇಬ್ಬರು ಮೃತರ ಕುಟುಂಬದ ಸದಸ್ಯರುಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ ಆಡಳಿತ ಮಂಡಳಿಯ ತೀರ್ಮಾನ ಕೋರಿದೆ.

ಬಾಕಿ ಉಳಿದ 10 ಮೃತ ಕುಟುಂಬದ ಸದಸ್ಯರುಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ ಈ ಕೆಳಕಂಡಂತೆ ಕ್ರಮವಹಿಸಿದೆ.

| ಕ್ರ ಸಂ. | ಹೆಸರು | ಹುದ್ದೆ | ಕಾರ್ಯನಿರ್ವಹಿಸುತ್ತಿದ್ದ ಶಾಲೆ | ಮರಣ ಹೊಂದಿದ ದಿನಾಂಕ | ಸಂಘದಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆಗಳನ್ನು ಕೋರಿ ಅರ್ಜಿ ಸ್ವೀಕೃತವಾದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಗಳು |
|---|---|---|---|---|---|
| 1 | ಅಂಕುಶ್ ಡೋಂಗ್ರೆ | ದೈಹಿಕ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಗದಲ್, ಬೀದರ್ ಜಿಲ್ಲೆ | 04.12.2011 | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮ-2011ರ ಷೆಡ್ಯೂಲ್-1(19)ರಲ್ಲಿನ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗದಿಪಡಿಸಿದ ಎಸ್.ಎಸ್.ಎಲ್.ಸಿ ಪರೀಕ್ಷೆ ಉತ್ತೀರ್ಣ ಮತ್ತು ಕಂಪ್ಯೂಟರ್ 6 ತಿಂಗಳ ತರಬೇತಿ ಪಡೆದಿಲ್ಲವಾದ್ದರಿಂದ ಹಾಗೂ 'ಡಿ' ಗ್ರೂಪ್ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಿಕೊಳ್ಳಲು ಅನುಮೋದನೆ ಇಲ್ಲದೇ ಇರುವುದರಿಂದ ಈ ವಿಷಯವನ್ನು ತಿಳಿಸಿ ದಿ: 28.02.2014ರಂದು ಹಿಂಬರಹ ನೀಡಲಾಗಿದೆ. |
| 2 | ಆನಂದ ಹರದಳ್ಳಿ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಚಿಕ್ಕಮುಚ್ಚಲಗುಡ್ಡ, ಬಾದಾಮಿ, ಬಾಗಲಕೋಟೆ | 16.07.2012 | ಸದರಿಯವರ ಪತ್ನಿಯಾದ ಶ್ರೀಮತಿ ಮಂಜುಳಾ ಹರದಳ್ಳಿರವರು 7ನೇ ತರಗತಿ ಉತ್ತೀರ್ಣರಾಗಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮ-2011ರಲ್ಲಿ ಈ ವಿದ್ಯಾರ್ಹತೆಗೆ ಯಾವುದೇ ಹುದ್ದೆಯು ಲಭ್ಯವಿರುವುದಿಲ್ಲ. |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| | | | | | |
|---|---|---|---|---|---|
| 3 | ಬಸವರಾಜ್ ಹತ್ತರಕಿ | ಸಮಾಜ ವಿಜ್ಞಾನ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಾಗನೂರು, ಬೆಳಗಾವಿ ಜಿಲ್ಲೆ | 02.02.2013 | ದಿವಂಗತ ಬಸವರಾಜ್ ಹತ್ತರಕಿ ಇವರು ಅವಿವಾಹಿತರಾಗಿರುವುದರಿಂದ ಇಂತಹ ಪ್ರಕರಣದಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ 1996ರ ನಿಯಮಾವಳಿಗಳಲ್ಲಿ ಸ್ಪಷ್ಟತೆ ಇರುವುದಿಲ್ಲ.ಈ ಬಗ್ಗೆ ಮಾಹಿತಿ ಪಡೆಯಲು ಕ್ರಮ ವಹಿಸಿದೆ. ಆದಾಗ್ಯೂ ಸಹ ದಾಖಲಾತಿಗಳನ್ನು ಪಡೆಯಲು ಕ್ರಮವಹಿಸಿದೆ. |
| 4 | ಮಲ್ಲಪ್ಪ ಹ. ಬಡಿಗೇರ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೆಳ್ಳಿಗೇರಿ, ಮುಧೋಳ, ಬಾಗಲಕೋಟೆ | 05.11.2013 | ಈ ಕಛೇರಿಯಿಂದ ಪತ್ರ ಬರೆಯಲಾಗಿದ್ದು, ಉತ್ತರಜೀವಿ ವರದಿ ಹಾಗೂ ಇತರ ದಾಖಲಾತಿಗಳು ಬಂದ ನಂತರ ಕ್ರಮವಹಿಸಲಾಗುವುದು. |
| 5 | ವಿಶಾಲಾಕ್ಷಿ | ಸಮಾಜ ವಿಜ್ಞಾನ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮುಂಡಗೋಡು, ಉತ್ತರಕನ್ನಡ ಜಿಲ್ಲೆ | 07.01.2014 | ದಿವಂಗತ ವಿಶಾಲಾಕ್ಷಿ ಇವರು ಅವಿವಾಹಿತರಾಗಿರುವುದರಿಂದ ಇಂತಹ ಪ್ರಕರಣದಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ 1996ರ ನಿಯಮಾವಳಿಗಳಲ್ಲಿ ಸ್ಪಷ್ಟತೆ ಇರುವುದಿಲ್ಲ. ಈ ಬಗ್ಗೆ ಸ್ಪಷ್ಟೀಕರಣ ಪಡೆದು, ಮುಂದಿನ ಕ್ರಮ ವಹಿಸಬೇಕಾಗಿದೆ. ಆದಾಗ್ಯೂ, ದಾಖಲಾತಿಗಳನ್ನು ಪಡೆಯಲು ಕ್ರಮವಹಿಸಿದೆ. |
| 6 | ಈರಣ್ಣ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮುರಗುಂಡಿ, ಅಥಣಿ ತಾ. ಬೆಳಗಾವಿ ಜಿಲ್ಲೆ | 05.04.2014 | ಸದರಿ ಪ್ರಕರಣದಲ್ಲಿ ಇವರ ಪತ್ನಿಯಾದ ಶ್ರೀಮತಿ ಮಂಜುಳಾ ನಾಯಕ್‌ರವರೂ ಮೃತರಾಗಿದ್ದು, ಇವರ ಇಬ್ಬರು ಮಕ್ಕಳು ಅಪ್ರಾಪ್ತ ವಯಸ್ಸಿನವರಾಗಿರುತ್ತಾರೆ.(ಸ್ಟೇಹಾ-10ವರ್ಷ, ಜ್ಯೋತಿ-08ವರ್ಷ) ಇಂತಹ ಪ್ರಕರಣದಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ 1996ರ ನಿಯಮಾವಳಿಗಳಲ್ಲಿ ಸಷ್ಟತೆ ಇರುವುದಿಲ್ಲ. ಈ ಬಗ್ಗೆ |
| 7 | ಉಷಾರಾಣಿ ಡಿ.ಆರ್ | ಶುಶ್ರೂಷಕರು | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಭುವನಹಳ್ಳಿ, ತುಮಕೂರು ಜಿಲ್ಲೆ | 19.06.2014 | ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅರ್ಜಿ ಮತ್ತು ನಿಗದಿತ ಇತರೆ ದಾಖಲಾತಿಗಳನ್ನು ನೀಡುವಂತೆ ಪತ್ರ ರವಾನಿಸಲಾಗಿದ್ದು, ವರದಿ ಬಂದ ನಂತರ ಕ್ರಮವಹಿಸಲಾಗುವುದು. |
| 8 | ಬಸವಂತಪ್ಪ ಹೆಚ್ | ಪ್ರಾಂಶುಪಾಲರು | ಮೊರಾರ್ಜಿ ವಸತಿ ಶಾಲೆ, ಹಳ್ಳಿಬೈಲ್, ಹಾವೇರಿ ಜಿಲ್ಲೆ | 10.04.2015 | ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅರ್ಜಿ ಮತ್ತು ನಿಗದಿತ ಇತರೆ ದಾಖಲಾತಿಗಳನ್ನು ನೀಡುವಂತೆ ಪತ್ರ ರವಾನಿಸಲಾಗಿದ್ದು, ವರದಿ ಬಂದ ನಂತರ |
| 9 | ತಿಪ್ಪೇಸ್ವಾಮಿ ಎ | ವಿಜ್ಞಾನ ಶಿಕ್ಷಕರು | ಮೊರಾರ್ಜಿ ವಸತಿ ಶಾಲೆ, ಅವರಗೆರೆ, ದಾವಣಗೆರೆ ಜಿಲ್ಲೆ | 19.06.2015 | ಸಂಬಂಧಿತ ಪ್ರಾಂಶುಪಾಲರಿಗೆ ಅರ್ಜಿ ಮತ್ತು ನಿಗದಿತ ಇತರೆ ದಾಖಲಾತಿಗಳನ್ನು ನೀಡುವಂತೆ ಪತ್ರ ರವಾನಿಸಲಾಗಿದ್ದು, ವರದಿ ಬಂದ ನಂತರ ಕ್ರಮವಹಿಸಲಾಗುವುದು. |
| 10 | ಭೀಮರಾಯ ಮರಗಪ್ಪ ಮಾದರ | ಕನ್ನಡ ಶಿಕ್ಷಕರು | ಮೊರಾರ್ಜಿ ವಸತಿ ಶಾಲೆ, ದನ್ನೂರು, ಹುನಗುಂದ ತಾ. ಬಾಗಲಕೋಟೆ | 25.02.2015 | ಸಂಬಂಧಿತ ಪ್ರಾಂಶುಪಾಲರಿಗೆ ಅರ್ಜಿ ಮತ್ತು ನಿಗದಿತ ಇತರೆ ದಾಖಲಾತಿಗಳನ್ನು ನೀಡುವಂತೆ ಪತ್ರ ರವಾನಿಸಲಾಗಿದ್ದು, ವರದಿ ಬಂದ ನಂತರ ಕ್ರಮವಹಿಸಲಾಗುವುದು. |

**ತೀರ್ಮಾನ:**

ವಿಷಯವನ್ನು ಪ್ರತ್ಯೇಕ ಕಡತದಲ್ಲಿ ಸಲ್ಲಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ:16

2015-16ನೇ ಸಾಲಿಗೆ 26 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳು ಹಾಗೂ 04 ಏಕಲವ್ಯ ಮಾದರಿ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ತರಗತಿಗಳ ಪಠ್ಯ ಪುಸ್ತಕಗಳು ಮತ್ತು ಪ್ರಾಕ್ಟಿಕಲ್ ರೆಕಾರ್ಡ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

2015-16ನೇ ಸಾಲಿಗೆ 26 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳು ಹಾಗೂ 04 ಏಕಲವ್ಯ ಮಾದರಿ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಥಮ ಮತ್ತು ದ್ವಿತೀಯ

ಪಿ.ಯು.ಸಿ. ತರಗತಿಗಳ ಪಠ್ಯ ಪುಸ್ತಕಗಳನ್ನು ಪೂರೈಸಲು ಕರ್ನಾಟಕ ಪಠ್ಯ ಪುಸ್ತಕಗಳ ಪ್ರಾಧಿಕಾರ ಬೆಂಗಳೂರು ರವರಿಂದ 2015-16ನೇ ಸಾಲಿಗೆ ಅನುಮೋದಿತ ಪಬ್ಲಿಕೇಷನ್‌ಗಳಾದ 1) **ಅಭಿಮಾನಿ ಪಬ್ಲಿಕೇಷನ್, ಬೆಂಗಳೂರು, 2)ಅಭಿಮಾನಿ ಪ್ರಕಾಶನ, ಬೆಂಗಳೂರು ಮತ್ತು 3)ಅಭಿಮಾನಿ ಪ್ರಕಾಶನ ಕಲರ್ ಪ್ರಿಟಿಂಗ್, ಬೆಂಗಳೂರು 2) ವಿನಾಯಕ ಆಫ್ ಸೆಟ್ ಪ್ರಿಂಟರ್ಸ್, ಬೆಂಗಳೂರು ಮತ್ತು 3) ಲಾವಣ್ಯ ಎಂಟರ್ ಪ್ರೈಸಸ್, 3) ಶ್ರೀ.ವೆಂಕಟೇಶ್ವರ ಪ್ರಿಂಟರ್ಸ್** ಬೆಂಗಳೂರು ರವರಿಂದ ಖರೀದಿ ಮಾಡಬೇಕಾಗಿರುತ್ತದೆ.

1) **ಅಭಿಮಾನಿ ಪಬ್ಲಿಕೇಷನ್, ಬೆಂಗಳೂರು, 2)ಅಭಿಮಾನಿ ಪ್ರಕಾಶನ, ಬೆಂಗಳೂರು ಮತ್ತು 3)ಅಭಿಮಾನಿ ಪ್ರಕಾಶನ ಕಲರ್ ಪ್ರಿಟಿಂಗ್, ಬೆಂಗಳೂರು** ರವರು ಷರತ್ತುಗಳ ಅನ್ವಯ ಸರಬರಾಜು ಮಾಡಲು ಒಪ್ಪಿಗೆ ಪತ್ರ ದಿನಾಂಕ:14-07-2015 ರಂದು ನೀಡಿರುವ ಹಿನ್ನಲೆಯಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ತರಗತಿಗಳ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡಲು ಸಂಘದಿಂದ ಆದೇಶ ನೀಡಲಾಗಿರುತ್ತದೆ.

| Printer Details | No. of Text Books to be Supplied to MDR/Ekalvya Residential PU Colleges | | | (in Rupees) | | |
|---|---|---|---|---|---|---|
| | I PUC | II PUC | TOTAL | Total Cost of Each Text Books as Approved by KTBS | Discount 10% | Accepted Cost Payable |
| M/s.Abhimaani Publications | 11886 | 16786 | 28672 | 2564205 | 256420.5 | 2307784.5 |
| M/s.Abhimaani Prakashana | 14751 | 2745 | 17496 | 1493967 | 149396.7 | 1344570.3 |
| M/s.Abhimaani Prakashana Colour Printing | 7253 | 0 | 7253 | 453360 | 45336.0 | 408024 |
| M/s.Vinayaka Offset Printers | **0** | 2137 | 2137 | 87605 | 8760.5 | 78844.5 |
| M/s.Venkateshwara Enterprises | **0** | 3052 | 3052 | 90034 | 9003.4 | 81030.6 |
| M/s.Lavanya Printers | **0** | 1526 | 1526 | 32046 | 3204.6 | 28841.4 |
| | **33890** | **26246** | **53421** | **4721217** | **472121.7** | **4249095.3** |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಅಲ್ಲದೇ,ಮೆ॥ ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಮೆ॥ ವೆಂಕಟೇಶ್ವರ ಎಂಟರ್ ಪ್ರೈಸಸ್ ಹಾಗೂ ಲಾವಣ್ಯ ಪ್ರಿಂಟರ್ಸ್ ಇವರಿಂದ ಪಠ್ಯಪುಸ್ತಕಗಳನ್ನು ಸರಬರಾಜು ಪಡೆಯುವ ಬಗ್ಗೆ ಒಪ್ಪಿಗೆ ಪತವನ್ನು ನಿರೀಕ್ಷಿಸಿದ್ದು, ಈಗಾಗಲೇ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ತರಗತಿಗಳು ಪ್ರಾರಂಭವಾಗಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮೇಲ್ಕಂಡಂತೆ ಒಟ್ಟು

**ರೂ.42,49,095/-ಗಳ ವೆಚ್ಚದಲ್ಲಿ** ಮೊರಾರ್ಜಿ ದೇಸಾಯಿ/ಏಕಲವ್ಯ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕರ್ನಾಟಕ ಪಠ್ಯಪುಸ್ತಕ ಸೊಸೈಟಿರವರಿಂದ ಅನುಮೋದನೆಯಾಗಿರುವ ಮೇಲ್ಕಂಡ ಮುದ್ರಣಕಾರರಿಂದ ಪಠ್ಯಪುಸ್ತಕಗಳನ್ನು ಸರಬರಾಜು ಪಡೆಯಲು ಕಾರ್ಯಾದೇಶ ನೀಡಲಾಗಿದೆ. ಈ ಬಗ್ಗೆ ಸಂಘವು ಕೈಗೊಂಡ ಕ್ರಮವನ್ನು ಅನುಮೋದಿಸಲು ಕೋರಿದೆ.

ಆಲ್ಲದೇ, 2015-16ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 26 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳು ಹಾಗೂ 4 ಏಕಲವ್ಯ ವಸತಿ ಕಾಲೇಜುಗಳಲ್ಲಿ ವ್ಯಾಸಂಗ ಮಡುತ್ತಿರುವ I PUC & II PUC ವಿದ್ಯಾರ್ಥಿಗಳಿಗೆ (PCMB & PCMCs ಸಂಯೋಜನೆಗಳಲ್ಲಿ) Practical Record ಗಳನ್ನು ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗನುಗುಣವಾಗಿ ಲೆಕ್ಕಚಾರ ಮಾಡಿ, ವೆಚ್ಚ ಭರಿಸಲಾಗಿದೆ.

ವಸತಿ ಕಾಲೇಜುಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಪಟ್ಟ ಪ್ರಾಂಶುಪಾಲರುಗಳು, ಅಗತ್ಯ Practical Record ಗಳನ್ನು ಸ್ಥಳೀಯವಾಗಿ ನಿಯಮಾನುಸಾರ ಖರೀದಿ ಮಾಡಲು ತಿಳಿಸಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಸತಿ ಕಾಲೇಜುಗಳ ಪ್ರಾಂಶುಪಾಲರ ಜಂಟಿ ಖಾತೆಗೆ ರೂ.11,69,190/- ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, 2015-16ನೆ ಸಾಲಿಗೆ ವಸತಿ ಕಾಲೇಜುಗಳ ವಿ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ರೂ.11,69,190/- ಗಳ ವೆಚ್ಚದಲ್ಲಿ ಅಗತ್ಯ Practical Record ಗಳನ್ನು ಒದಗಿಸಲು ಹಾಗೂ ಪಠ್ಯ ಪುಸ್ತಕಗಳ ಖರೀದಿಗೆ **ರೂ.42,49,095/- ಗಳ ವೆಚ್ಚದಲ್ಲಿ ಖರೀದಿಸಲು** ಸಂಘವು ಕೈಗೊಂಡ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ವಿಷಯದ ಬಗ್ಗೆ ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಖರೀದಿಗೆ ಕೈಗೊಂಡ ಕ್ರಮ ಹಾಗೂ ಪ್ರಾಕ್ಟಿಕಲ್ ರೆಕಾರ್ಡ್‌ಗಳನ್ನು ಖರೀದಿಸಲು ಭರಿಸಿದ ವೆಚ್ಚ ರೂ.42,49,095/-ಗಳನ್ನು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ: 17

**2015-16ನೇ ಸಾಲಿನಲ್ಲಿ, ನೋಟ್ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ಮೆ॥ ಮೈಸೂರು ಪೇಪರ್ ಮಿಲ್ಸ್, ಬೆಂಗಳೂರು ಇವರಿಂದ ಖರೀದಿಸಲು ಆದೇಶ ನೀಡಿರುವ ಬಗ್ಗೆ.**

2015-16ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಒಟ್ಟು 505 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಹಾಗೂ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ದಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ರೂ.5.29 ಕೋಟಿಗಳ ವೆಚ್ಚದಲ್ಲಿ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ:ಹಿಂವಕ 347 ಬಿಇಬಿ 2015, ಬೆಂಗಳೂರು ದಿನಾಂಕ:17-07-2015 ರಲ್ಲಿ ಅನುಮೋದನೆ ನೀಡಿದೆ. ಅದರಂತೆ ಅಗತ್ಯ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಈ ಕೆಳಕಂಡ ಮಾದರಿ ಮತ್ತು ದರಗಳನ್ವಯ ಸರಬರಾಜು ಮಾಡಲು ದಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ಸಂಸ್ಥೆಗೆ ದಿನಾಂಕ:17-07-2015 ರಂದು ಕಾರ್ಯಾದೇಶ ನೀಡಿದೆ.

| Sl. No. | Varities | Size of Book (cms) | No. of Pages | Quoted price (including VAT @ 5%) (In Rupees) |
|---|---|---|---|---|
| 1 | Short Note Book | 19.0X15.5 | 184 | 17.50 |
| 2 | Short Note Book | 19.0X15.5 | 88 | 10.50 |
| 3 | King Size | 18.0X24.0 | 184 | 27.95 |
| 4 | Long | 19.0X31.0 | 184 | 36.10 |
| 5 | Answer Sheet (Cut Sheet) | 19.0X33.0 | 480 Sheets | 160.00 |
| 6 | Geometry Box(Camilin Brand) | | Per Unit | 89.90 |

ಸರ್ಕಾರದ ಆದೇಶದನ್ವಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಅಗತ್ಯ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಸಕಾಲದಲ್ಲಿ ಒದಗಿಸಲು ಸಂಘವು ಕ್ರಮವಹಿಸಿದೆ. ಸಂಘದ ಕ್ರಮವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಕೋರಿದೆ.

ತೀರ್ಮಾನ:

ಆಡಳಿತ ಮಂಡಳಿ ಸಭೆಯು ವಿಷಯವನ್ನು ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ದಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ವತಿಯಿಂದ ಪಠ್ಯಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು ಖರೀದಿಸಲು ವಹಿಸಿದ ಕ್ರಮವನ್ನು ಅನುಮೋದಿಸಿತು. ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಖರೀದಿಗೆ ಕೈಗೊಂಡ ಕ್ರಮ ಹಾಗೂ ಪ್ರಾಕ್ಟಿಕಲ್ ರೆಕಾರ್ಡ್‌ಗಳನ್ನು ಖರೀದಿಸಲು ಭರಿಸಿದ ವೆಚ್ಚ ರೂ.42,49,095/-ಗಳನ್ನು ಅನುಮೋದಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 19**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅದೀನದಲ್ಲಿ ಬರುವ ವಸತಿ ಶಾಲೆಗಳಿಗೆ ಅವಶ್ಯವಿರುವ ಸೋಲಾರ್ ವಾಟರ್ ಹೀಟರ್, ಸೋಲಾರ್ ಸ್ಟ್ರೀಟ್ ಲೈಟ್(ಬೀದಿ ದೀಪ), ಸೋಲಾರ್ ಪವರ್ ಪ್ಯಾಕ್, ಸೋಲಾರ್ ಯುಪಿಎಸ್, ಹಾಗೂ ಸೋಲಾರ್ ಸಂಬಂದಿಸಿದ ಉಪಕರಣಗಳನ್ನು ವಸತಿ ಶಾಲೆಗಳಲ್ಲಿ ಅಳವಡಿಸಲು ಟೆಂಡರ್ ಕರೆಯುವ ಬಗ್ಗೆ.**

ಸಂಘವು 62 ನೇ ಆಡಳಿತ ಮಂಡಳಿಯ ತೀರ್ಮಾನದಂತೆ ವಸತಿ ಶಾಲೆ/ಕಾಲೇಜುಗಳಿಗೆ ಮೇಲೆ ಹೇಳಲಾದ ಸಾಮಗ್ರಿಗಳನ್ನು ಮೆ॥ ಕಿಯೋನಿಕ್ಸ್ ಮುಖಾಂತರ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯ 1999ರ ಕಲಂ 4(ಜಿ ) ವಿನಾಯಿತಿ ಪಡೆದು ಖರೀದಿಸಲು ತೀರ್ಮಾನ ನೀಡಿದೆ.

ಆಡಳಿತ ಮಂಡಳಿಯ ತೀರ್ಮಾನದಂತೆ ಸಂಘವು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈವರೆಗೂ ಅಧಿಸೂಚನೆ ಹೊರಡಿಸಿರುವುದಿಲ್ಲ. ಆದುದರಿಂದ ಮೇಲೆ ಹೇಳಲಾದ ಸಾಮಗ್ರಿಗಳನ್ನು ವಸತಿ ಶಾಲೆಗಳ (ಸಂಖ್ಯೆ) ಅನುಗುಣವಾಗಿ ತಿಳಿಸಲಾದ ಪ್ರಮಾಣದಲ್ಲಿ KTPP ಕಾಯ್ದೆಯಡಿಯಲ್ಲಿ ಟೆಂಡರ್ ಕರೆದು ಖರೀದಿಸಲು ಉದ್ದೇಶಿಸಿದೆ.

| ಕ್ರ ಸಂ | ವಿವರ | ವಸತಿ ಶಾಲೆಗಳ ಸಂಖ್ಯೆ | ಪ್ರಮಾಣ | ಮೊತ್ತ |
|---|---|---|---|---|
| 1 | Solar Water Heater | 57 | 228 | 58068180 |
| 2 | Solar Street light | 200 | 1600 | 89592000 |
| 3 | C.C. Camara | 203 | 406 | 81046532 |
| 4 | Solar UPS( power pack) with LED Lighting system | 203 | 609 | 187977594 |
| 5 | Solar UPS For Computer (Solar Power Pack Systems) | 226 | 226 | 117351856 |
| 6 | Solar Steam Cooking Systems | 196 | 196 | 319667572 |
| **Total** | | | | **85,37,03,734** |

ಮೇಲೆ ಹೇಳಲಾದ ಸಾಮಗ್ರಿಗಳ ಮೊತ್ತವನ್ನು ಮೆ॥ ಕಿಯೋನಿಕ್ಸ್ ಈಗಾಗಲೇ ನೀಡಿದ ದರಪಟ್ಟಿಯಂತೆ ರೂ 85.37 ಕೋಟಿಗಳ ವೆಚ್ಚ ಭರಿಸಭೇಕಾಗುತ್ತದೆ. ಈ ಸಂಬಂಧ ಸರ್ಕಾರದ ಅನುಮೋದನೆ ಕೋರಿ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದು ಮುಂದಿನ ಆದೇಶ ನಿರೀಕ್ಷಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸರ್ಕಾರ ಅನುಮತಿ ಪಡೆದು ಟೆಂಡರ್ ಕರೆಯಲು ಅನುಮೋದನೆ ಕೋರಿದೆ.

ತೀರ್ಮಾನ:

ಸಭೆಯು ವಿಷಯವನ್ನು ಚರ್ಚಿಸಿತು. ಈ ಬಗ್ಗೆ ಸರ್ಕಾರದ ಆದೇಶವನ್ನು ಸಧ್ಯದಲ್ಲಿಯೇ ಹೊರಡಿಸಲಾಗುವುದೆಂದು ಮಾನ್ಯ ಉಪಾದ್ಯಕ್ಷರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರು ಸಭೆಗೆ ತಿಳಿಸಿದರು. ಆಡಳಿತ ಮಂಡಳಿಯು ಸರ್ಕಾರದ ಆದ್ದೇಶದಂತೆ ಕ್ರಮವಹಿಸಲು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 20</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆ/ ಕಾಲೇಜುಗಳಿಗೆ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಸರಬರಾಜು ಮಾಡುವ ಬಗ್ಗೆ.</u>

ಸಂಘವು 62 ನೇ ಆಡಳಿತ ಮಂಡಳಿಯ ತೀರ್ಮಾನದಂತೆ ವಸತಿ ಶಾಲೆ/ಕಾಲೇಜುಗಳಿಗೆ 280 ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆಗಳಿಗೆ 3 ಕಂಪ್ಯೂಟರ್ ಮತ್ತು 1 ಪ್ರಿಂಟರ್‌ಗಳಂತೆ 892 ಕಂಪ್ಯೂಟರ್ ಹಾಗೂ 280 ಪ್ರಿಂಟರ್‌ಗಳನ್ನು TAP ಸಮಿತಿಯ ತೀರ್ಮಾನದಂತೆ ಕ್ರಮವಹಿಸಲು ತೀರ್ಮಾನಿಸಿದೆ. ಆಡಳಿತ ಮಂಡಳಿಯ ತೀರ್ಮಾನದಂತೆ ಸಂಘವು ದಿ:08.05.2015 ಮೇಲೆ ಹೇಳಲಾದ ಪ್ರಮಾಣದಲ್ಲಿ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ ಸರಬರಾಜು ಮಾಡಲು ರೂ 470.37 ಲಕ್ಷಗಳಿಗೆ ಸರಬರಾಜು ಮಾಡಲು ಮೇಲೆ ಹೇಳಲಾದ ದಿನಾಂಕದಂದು ಆದೇಶ ನೀಡಿದೆ. ಸದರಿ ಸಂಸ್ಥೆಯವರು ಈ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮವಹಿಸಿದೆ.

ಸ್ವಂತ ಕಟ್ಟಡದಲ್ಲಿರುವ ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಅನುಗುಣವಾಗಿ ಪ್ರತಿ ವಸತಿ ಶಾಲೆಗೆ 12 ಕಂಪ್ಯೂಟರ್, 1 ಪಿಂಟರ್ ಹಾಗೂ ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳಿಗೆ 1 ಕಂಪ್ಯೂಟರ್, 1 ಪ್ರಿಂಟರ್ ಸರಬರಾಜು ಮಾಡುವುದು ಅವಶ್ಯವಾಗಿರುವುದನ್ನು ಮನಗಂಡು 487 ವಸತಿ ಶಾಲೆಗಳಿಗೆ 3761/– ಕಂಪ್ಯೂಟರ್ ಹಾಗೂ 190 ಡಾಟ್ ಮೆಟ್ರಿಕ್ಸ್ ಪ್ರಿಂಟರ್‌ಗಳನ್ನು ಖರೀದಿಸಲು ಉದ್ದೇಶಿಸಿದೆ. ಖರೀದಿಗೆ ಮುಂಚಿತವಾಗಿ TAP ಸಮಿತಿಯನ್ನು ಕರೆದು ವಸತಿ ಶಾಲೆಗಳ ವಿದ್ಯಾರ್ಥಿಗಳ ಉಪಯೋಗಕ್ಕೆ ಅಗತ್ಯ ವಿನ್ಯಾಸಗಳನ್ನು ನಿಗಧಿಪಡಿಸಿಕೊಳ್ಳಲಾಗುವುದು. ತದನಂತರ ಶಾಶ್ವತ ಖರೀದಿ ಸಮಿತಿಯ ಸಭೆ ಕರೆದು ಮಾರುಕಟ್ಟೆ ದರವನ್ನು ಮೆ॥ ಕಿಯೋನಿಕ್ಸ್ ಸಂಸ್ಥೆಯ ದರಗಳೊಂದಿಗೆ ತುಲನೆ ಮಾಡಿ ಮುಂದಿನ ಕ್ರಮ ವಹಿಸಲಾಗುವುದು.

ಪರ್ಯಾಯವಾಗಿ 12 ಕಂಪ್ಯೂಟರ್ ಬದಲಾಗಿ 15 Thin clint with 2 Server (Windows/ Linux Operating Syetem) ಗಳನ್ನು LAN work ದೊಂದಿಗೆ ವಸತಿ ಶಾಲೆಗಳಿಗೆ ಸರಬರಾಜು ಮಾಡಲು ಉದ್ದೇಶಿಸಿದೆ. ಕಂಪ್ಯೂಟರ್‌ಗಳ ಬದಲಾಗಿ Thin clintಗಳನ್ನು ಅಳವಡಿಸಿಕೊಂಡಲ್ಲಿ, ಸಂಘಕ್ಕೆ ಉಳಿತಾಯವಾಗುತ್ತದೆ. ಕಂಪ್ಯೂಟರ್‌ಗಳಿಗೆ ಮತ್ತು Thin clint ಗಳ ತುಲನಾತ್ಮಕ ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ. ಅದಾಗ್ಯೂ TAP ಸಮಿತಿಯಲ್ಲಿ ಕಂಪ್ಯೂಟರ್‌ಗಳ/ Thin clint with serverಗಳ ಅಳವಡಿಕೆಯ ಬಗ್ಗೆ ದೀರ್ಘವಾಗಿ ಚರ್ಚಿಸಿ, ಕ್ರಮಕೈಗೊಳ್ಳಬಹುದಾಗಿದೆ. ಹಾಗೂ ವಸತಿ ಶಾಲೆಗಳ ಕಛೇರಿ ಕೆಲಸಗಳಿಗಾಗಿ Monochrome Multi Function Device (Desktop Model with multifunctions like copy, print and scan) ಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಒಪ್ಪಿದಲ್ಲಿ, TAP ಸಮಿತಿಯ ನಿರ್ಧಾರದಂತೆ, ಕಂಪ್ಯೂಟರ್‌ಗಳ/ Thin clint with serverಗಳ ಅಳವಡಿಕೆ ಬಗ್ಗೆ ಮಾನ್ಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅನುಮೋದನೆ ಪಡೆದು ಕ್ರಮವಹಿಸುವ ಬಗ್ಗೆ ಅನುಮೋದನೆ ಕೋರಿದೆ.

**<u>ತೀರ್ಮಾನ:</u>**

ಆಡಳಿತ ಮಂಡಳಿಯು ವಿಷಯವನ್ನು ಪ್ರತ್ಯೇಕ ಕಡತದೊಂದಿಗೆ ಸಲ್ಲಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ : 21

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಆಕಸ್ಮಿಕ ಮರಣ ಹೊಂದಿದ ವಿದ್ಯಾರ್ಥಿಗಳ ಪೋಷಕರುಗಳಿಗೆ ತಲಾ ರೂ. 1.00 ಲಕ್ಷಗಳ ಪರಿಹಾರ ಧನವನ್ನು ನೀಡುವ ಬಗ್ಗೆ.

ಅ) ಕರ್ನಾಟಕ ವಸತಿ ಶಿಕ್ಷಣ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಈ ಕೆಳಕಂಡ ವಿದ್ಯಾರ್ಥಿಗಳು ಮರಣ ಹೊಂದಿರುತ್ತಾರೆ. ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳ ವರದಿಯನ್ನಾಧರಿಸಿ ಸಂಘದ 47ನೇ ಆಡಳಿತ ಮಂಡಳಿ ತೀರ್ಮಾನದಂತೆ ತಲಾ ರೂ.1.00 ಲಕ್ಷಗಳ ಪರಿಹಾರ ಧನವನ್ನು ಮೃತ ವಿದ್ಯಾರ್ಥಿಗಳ ಪೋಷಕರುಗಳಿಗೆ ನೀಡಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

| ಕ್ರ. ಸಂ | ಮೃತ ವಿದ್ಯಾರ್ಥಿಯ ಹೆಸರು | ವಸತಿ ಶಾಲೆಯ ವಿವರ | ಮರಣಕ್ಕೆ ಸಂಬಂಧಿಸಿದ ವಿವರ | ಪೋಷಕರಿಗೆ ನೀಡಲಾದ ಪರಿಹಾರ ಧನದ ಮೊತ್ತ |
|---|---|---|---|---|
| 1 | ಕುಮಾರ ಮೊಹಮ್ಮದ್ ಸಲ್ಲಾವುದ್ದೀನ್ 8ನೇ ತರಗತಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಪರೇಸಂದ್ರ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ | ಆಕಸ್ಮಿಕ ಮರಣ | 1.00 ಲಕ್ಷ |
| 2 | ಕು॥ ಐಶ್ವರ್ಯ 8ನೇ ತರಗತಿ | ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮುರಗುಂಡಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | ಸೀಲಿಂಗ್‌ಗೆ ನೇಣು ಬಿಗಿದುಕೊಂಡು ಮರಣ ಹೊಂದಿರುತ್ತಾರೆ | 1.00 ಲಕ್ಷ |
| 3 | ಕುಮಾರಿ ರಂಜಿತಾ 9ನೇ ತರಗತಿ | ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗುಡ್ಡೇನಹಳ್ಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ | ಆತ್ಮ ಹತ್ಯೆ | 1.00 ಲಕ್ಷ |

ಮೇಲಿನ 3 ಪ್ರಕರಣಗಳಲ್ಲಿ ತಲಾ ರೂ.1.00 ಲಕ್ಷಗಳ ಪರಿಹಾರ ಧನವನ್ನು ಮೃತ ವಿದ್ಯಾರ್ಥಿಗಳ ಪೋಷಕರಿಗೆ ಪಾವತಿಸಿದ ಕ್ರಮವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರಿದೆ.

ಆ) ಕರ್ನಾಟಕ ವಸತಿ ಶಿಕ್ಷಣ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಈ ಕೆಳಕಂಡ 2 ವಿದ್ಯಾರ್ಥಿಗಳು ಮರಣ ಹೊಂದಿರುತ್ತಾರೆ. ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳ ವರದಿಯನ್ನಾಧರಿಸಿ ಸಂಘದ 47ನೇ ಆಡಳಿತ ಮಂಡಳಿ ತೀರ್ಮಾನದಂತೆ ತಲಾ ರೂ.1.00 ಲಕ್ಷಗಳ ಪರಿಹಾರ ಧನವನ್ನು ಮೃತ ವಿದ್ಯಾರ್ಥಿಗಳ ಪೋಷಕರುಗಳಿಗೆ ನೀಡಬೇಕಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ | ಮೃತ ವಿದ್ಯಾರ್ಥಿಯ ಹೆಸರು | ವಸತಿ ಶಾಲೆಯ ವಿವರ | ಮರಣಕ್ಕೆ ಸಂಬಂಧಿಸಿದ ವಿವರ | ಪೋಷಕರಿಗೆ ಪ್ರಸ್ತಾಪಿಸಿದ ಪರಿಹಾರ ಧನದ ಮೊತ್ತ |
|---|---|---|---|---|
| 1 | ಕುಮಾರಿ ನಾಗರತ್ನ 10ನೇ ತರಗತಿ | ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ. | ತೀವ್ರ ಜ್ವರದಿಂದ ಮರಣ | 1.00 ಲಕ್ಷ |
| 2 | ಕುಮಾರ ಹುಲಿರಾಜ 9ನೇ ತರಗತಿ | ಪರಿಶಿಷ್ಟ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಚೋರನೂರು, ಸಂಡೂರು ತಾ॥, ಬಳ್ಳಾರಿ ಜಿಲ್ಲೆ | ನೇಣು ಬಿಗಿದುಕೊಂಡು ಮರಣ ಹೊಂದಿರುತ್ತಾರೆ | 1.00 ಲಕ್ಷ |

ಸಂಘದ 47ನೇ ಆಡಳಿತ ಮಂಡಳಿಯ ಸಭೆಯಲ್ಲಿ ಮೃತ ವಿದ್ಯಾರ್ಥಿಗಳ ಪೋಷಕರುಗಳಿಗೆ ರೂ.1.00 ಲಕ್ಷಗಳ ಪರಿಹಾರ ಧನ ನೀಡಲು ತೀರ್ಮಾನಿಸಿದೆ.

ಅದರಂತೆ ಮೃತರ ಕುಟುಂಬಗಳಿಗೆ ತಲಾ ರೂ.1.00 ಲಕ್ಷದಂತೆ 2 ಕುಟುಂಬಗಳಿಗೆ ಪರಿಹಾರ ಧನವನ್ನು ಪಾವತಿಸುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ಪರಿಶೀಲಿಸಿ, ಈ ಕೆಳಕಂಡ ತೀರ್ಮಾನ ನೀಡಿದೆ.**

1. ವಿಷಯದ ಅ (1,2 ಮತ್ತು 3) ರ ಪ್ರಕರಣಗಳಲ್ಲಿ ತಲಾ ರೂ.1.00 ಲಕ್ಷಗಳ ಪರಿಹಾರ ಧನವನ್ನು ಮೃತ ವಿದ್ಯಾರ್ಥಿಗಳ ಪೋಷಕರಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಪಾವತಿಸಿದ ಕ್ರಮವನ್ನು ಅನುಮೋದಿಸಿತು.
2. ವಿಷಯದ ಆ (1 ಮತ್ತು 2) ರ ಪ್ರಕರಣಗಳಲ್ಲಿ ತಲಾ ರೂ.1.00 ಲಕ್ಷಗಳ ಪರಿಹಾರ ಧನವನ್ನು ಮೃತ ವಿದ್ಯಾರ್ಥಿಗಳ ಪೋಷಕರಿಗೆ ಪಾವತಿಸುವ ಬಗ್ಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಪ್ರತ್ಯೇಕ ಕಡತ ಸಲ್ಲಿಸಿ, ಅನುಮೋದನೆ ಪಡೆಯಲು ಸಭೆಯು ತೀಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 22**

**ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅನುಮೋದಿಸುವ ಬಗ್ಗೆ**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 59ನೇ ಆಡಳಿತ ಮಂಡಳಿ ಸಭೆ ದಿನಾಂಕ:18-09-2013 ಹಾಗೂ 19-09-2013ರ ನಂತರದಿಂದ ಈವರೆವಿಗೂ 313 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಪದವಿ ಪೂರ್ವ ವಸತಿ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿ ಹಾಗೂ ಹೆಚ್ಚುವರಿ ವಸತಿ ಗೃಹಗಳ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿಗಳಿಗೆ ವಿವಿಧ ದಿನಾಂಕಗಳಂದು ಟೆಂಡರ್‌ಗಳನ್ನು ಇ-ಪೋರ್ಟಲ್‌ನಡಿ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರರು ಅನುಮೋದಿಸಿರುವ ದರಗಳನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅಂಗೀಕಾರ ಸಮಿತಿ ಸಭೆಯ ದಿನಾಂಕ:19-09-2013, 21-10-2013, 19-12-2014, 17-03-2014, 09-06-2014, 12-11-2014,3-12-2014, 17-03-2015, 4-05-2015. 12-05-2015 ಹಾಗೂ 21-07-2015 ಗಳಲ್ಲಿ ಅನುಮೋದಿಸಲಾಗಿದೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

| ಕ್ರ. ಸಂ | ಟೆಂಡರ್ ಕಾಮಗಾರಿ ವಿವರಗಳು | ಅನುಮೋದಿಸಿದ ಕಾಮಗಾರಿಗಳ ವಿವರಗಳು |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು | 22 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 06 |
| 3 | ಏಕಲವ್ಯ ವಸತಿ ಶಾಲೆ | 01 |
| 4 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, | 01 |
| 5 | ವಿದ್ಯಾರ್ಥಿನಿಲಯ ಕಟ್ಟಡಗಳ ಕಾಮಗಾರಿ | 45 |
| 6 | ದುರಸ್ತಿ ಕಾಮಗಾರಿಗಳು | 163 |
| 7 | ಹೆಚ್ಚುವರಿ ವಸತಿ ಗೃಹ ನಿರ್ಮಾಣ | 74 |
| 8 | ಮುಸ್ಲಿಂ ವಸತಿ ಶಾಲೆ | 01 |
| | **ಒಟ್ಟು** | **313** |

ಮೇಲೆ ಹೇಳಲಾದ ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಯಥಾಸ್ಥಿತಿ ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 23</u>

<u>ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಕಾಮಗಾರಿಗಳ ಪ್ರಗತಿ ವಿವರಗಳನ್ನು ಸಲ್ಲಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಸದರಿ ಕಾಮಗಾರಿಗಳ ಪ್ರಗತಿಯ ಘೋಶ್ವಾರೆಗಳನ್ನು ಕ್ರಮವಾಗಿ ಅನುಬಂಧಗಳಲ್ಲಿ ನೀಡಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ದೀರ್ಘವಾಗಿ ಚರ್ಚಿಸಿ, ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಾಣ ಮಾಡಲು ಅಗತ್ಯವಿರುವ ನಿವೇಶನಗಳ ಮಾಹಿತಿಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿಕೊಡುವಂತೆ ತೀರ್ಮಾನಿಸಲಾಯಿತು. ಹಾಗೂ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳು ಜಿಲ್ಲಾ ಮಟ್ಟದ ಅಧಿಕಾರಿಗಳು/ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಒಂದು ತಿಂಗಳೊಳಗೆ ಜಮೀನು ಮಂಜೂರಾತಿ ಪಡೆಯಲು ತಾಕೀತು ಮಾಡುವಂತೆ ಸೂಚಿಸಲಾಯಿತು.**

<u>::ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಯಾದ ಹೆಚ್ಚುವರಿ ವಿಷಯಗಳ ಮೇಲೆ ತೀರ್ಮಾನ::</u>

<u>ಹೆಚ್ಚುವರಿ ವಿಷಯ ಸಂಖ್ಯೆ: 1</u>

**M/s.Asha Wellness Service Pvt.Ltd, ರವರಿಂದ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಉಚಿತವಾಗಿ ಹಮ್ಮಿಕೊಳ್ಳುವ ಬಗ್ಗೆ.**

M/s.Asha Wellness Service Pvt.Ltd ರವರು ವಸತಿ ಶಾಲೆಯ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಪತ್ರ ಮುಖೇನ ತಿಳಿಸಿದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಯಾವುದಾದರೂ 3 ವಸತಿ ಶಾಲೆಗಳ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಉಚಿತವಾಗಿ ಹಮ್ಮಿಕೊಳ್ಳಲು ಕೋರಿರುತ್ತಾರೆ.

ಪ್ರಸ್ತುತ ಬೆಂಗಳೂರು ಗ್ರಾಮಾಂತರ ಹಾಗೂ ನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 9 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 3 ವಸತಿ ಶಾಲೆಗಳಾದ 1) ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಯಿ ವಸತಿ ಶಾಲೆ, ಅತ್ತಿಬೆಲೆ/ಮಾರನಹಳ್ಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು

2) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ 3) ಮೊರಾರ್ಜಿ ದೇಸಾಯಿ ವಸತಿ ಶಾಲೆ, ಚಾಮರಾಜಪೇಟೆ, ಬೆಂಗಳೂರು ನಗರ ಜಿಲ್ಲೆ ಈ ವಸತಿ ಶಾಲೆಗಳಲ್ಲಿ M/s.Asha Wellness Service Pvt.Ltd ಸಂಸ್ಥೆಯವರಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರಿದೆ.

**ತೀರ್ಮಾನ:**

**ಸಮಯದ ಅಭಾವದಿಂದ ವಿಷಯದ ಬಗ್ಗೆ ಚರ್ಚೆಯಾಗದೇ ಮುಂದೂಡಲಾಯಿತು**

**ಹೆಚ್ಚುವರಿ ವಿಷಯ ಸಂಖ್ಯೆ: 2**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.**

**ತೀರ್ಮಾನ:**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದು, ಈ ಕಾಮಗಾರಿಗಳನ್ನು ತಾಂತ್ರಿಕ ಸಲಹೆಗಾರರು ತಯಾರಿಸುವ ವಿನ್ಯಾಸ ಮತ್ತು ಅಂದಾಜು ಪಟ್ಟಿ ಅನ್ವಯ ಕೈಗೆತ್ತಿಕೊಳ್ಳಲಾಗುತ್ತಿದೆ. ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಸಂಘಕ್ಕೆ ತನ್ನದೇ ಆದ ವಾಸ್ತು ಶಿಲ್ಪಿಗಳನ್ನು ಅವಶ್ಯಕವಿರುವುದಾಗಿ ಮನಗಂಡು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಅನ್ವಯ ಸಂಘಕ್ಕೆ ವಾಸ್ತುಶಿಲ್ಪಿಗಳನ್ನು Empanel ಮಾಡಿ, ನೇಮಕ ಮಾಡಿಕೊಳ್ಳಲು ಪ್ರತ್ಯೇಕ ಕಡತ ಸಲ್ಲಿಸಿ, ಅನುಮೋದನೆ ಪಡೆಯುವ ಬಗ್ಗೆ ಸಂಘವು ಕ್ರಮವಹಿಸುವಂತೆ ತೀರ್ಮಾನಿಸಿತು.**

ಹೆಚ್ಚುವರಿ ವಿಷಯ ಸಂಖ್ಯೆ: 3

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನೇರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಅಭ್ಯರ್ಥಿಗಳಿಗೆ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದಂತೆ, ಕೃಪಾಂಕ ನೀಡುವ ಪ್ರಕಿಯೆಯ ಬಗ್ಗೆ :

ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದಂತೆ ನೇರ ನೇಮಕಾತಿಗೆ ನಿಗಧಿಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳಿಗೆ ಸೇವಾ ಕೃಪಾಂಕ ನೀಡಿ ಆಯ್ಕೆಗೊಳಿಸುವ ಬಗ್ಗೆ ಸಂಘವು ಕ್ರಮವಹಿಸಿದೆ. ತತ್ಸಂಬಂಧವಾಗಿ 2442 ಹೊರ ಸಂಪನ್ಮೂಲದ ಸಿಬ್ಬಂದಿಗಳಿಂದ ಅರ್ಜಿಗಳು ಸ್ವೀಕೃತವಾಗಿವೆ. ಈ ಅರ್ಜಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮುಂದುವರಿದು, ಸನ್ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಬೋಧಕ ಸಿಬ್ಬಂದಿಗಳಿಗೆ ಸೇವಾ ಕೃಪಾಂಕ ನೀಡುವ ಸಂಬಂಧ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳೊಡನೆ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರುಗಳು ಈ ಕೆಳಕಂಡ ವಿಷಯಗಳ ಬಗ್ಗೆ ತೀರ್ಮಾನ ನೀಡಬೇಕೆಂದು ಮಾನ್ಯ ಸಚಿವರನ್ನು ಒತ್ತಾಯಿಸಿರುತ್ತಾರೆ.

- ❖ ಶೈಕ್ಷಣಿಕ ವರ್ಷದ ಪ್ರಾರಂಭದ ಮಾಹೆ ಜೂನ್ ತಿಂಗಳಾಗಿದ್ದರೂ ಸಹ ಕೆಲವು ಜಿಲ್ಲೆಗಳಲ್ಲಿ ಸಂಬಂಧಪಟ್ಟ ಹೊರಸಂಪನ್ಮೂಲ ಏಜೆನ್ಸಿಯವರು ನೇಮಕಾತಿ ಆದೇಶವನ್ನು ತಡವಾಗಿ ಅಂದರೆ, ಜುಲೈ, ಆಗಸ್ಟ್ ಅಥವಾ ಸೆಪ್ಟಂಬರ್ ಮಾಹೆಗಳಲ್ಲಿ ನೀಡಿರುವುದರಿಂದ ಆಯಾ ಶೈಕ್ಷಣಿಕ ವರ್ಷವನ್ನು ಸೇವಾ ಕೃಪಾಂಕಕ್ಕೆ ಪರಿಗಣಿಸದೇ ಇರುವುದರಿಂದ ಅಂತಹ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ.
- ❖ ಇನ್ನೂ ಕೆಲವು ವಸತಿ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ ತರಗತಿಗಳು ಪ್ರಾರಂಭವಾಗದೇ, ಪಠ್ಯಕ್ರಮವು (Syllabus) ಮಾರ್ಚ್ ತಿಂಗಳ ಅಂತ್ಯದಲ್ಲಿಯೇ ಮುಕ್ತಾಯವಾಗಿದ್ದು, ಸದರಿ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಶಿಕ್ಷಕರುಗಳನ್ನು ಕೆಲವು ವಸತಿ ಶಾಲೆಗಲ್ಲಿ ರುವುದಾಗಿ ತಿಳಿಸಿ, ಅಂತಹ ಪ್ರಕರಣಗಳಿಗೂ ಸಹ ಒಂದು ವರ್ಷದ ಪೂರ್ಣ ಸೇವೆಯೆಂದು ಪರಿಗಣಿಸಿ ಸೇವಾ ಕೃಪಾಂಕವನ್ನು ನೀಡಬೇಕೆಂದು ಮಾನ್ಯ ಸಚಿವರನ್ನು ಒತ್ತಾಯಿಸಿರುತ್ತಾರೆ.

ಆದರೆ, ಈಗಾಗಲೇ ಸಂಘವು ಜೂನ್ ಮಾಹೆಯಿಂದ ಮಾರ್ಚ್ ತಿಂಗಳವರೆಗೆ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಒಂದು ವರ್ಷದ ಸೇವಾ ಕೃಪಾಂಕಕ್ಕೆ ಪರಿಗಣಿಸುವ ಬಗ್ಗೆ ತೀರ್ಮಾನ ಅಗತ್ಯವಿದೆ. ಇಂಥ ಪ್ರಕರಣಗಳನ್ನು ಪರಿಗಣಿಸಿದಲ್ಲಿ, ಇದೇ ರೀತಿಯ ಇನ್ನೂ 257 ಪ್ರಕರಣಗಳನ್ನು ಪರಿಗಣಿಸುವ ಸಂಭವ ಉಂಟಾಗುತ್ತದೆ. ಇಂಥ ಕಡತಗಳ ವಿಷಯವಾರು ಅಭ್ಯರ್ಥಿಗಳ ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ.

ಮಾನ್ಯ ವಿಧಾನ ಪರಿಷತ್ ಸದಸ್ಯರುಗಳ ಕೋರಿಕೆಯಂತೆ, ಮೇಲ್ಕಂಡ ಪ್ರಕರಣಗಳಲ್ಲಿಯೂ ಸಹ ಮಾನವೀಯ ದೃಷ್ಟಿಯಿಂದ ಒಂದು ವರ್ಷದ ಪೂರ್ಣ ಸೇವೆಯೆಂದು ಪರಿಗಣಿಸಿ ಸೇವಾ ಕೃಪಾಂಕವನ್ನು ನೀಡುವ ಬಗ್ಗೆ ಹಾಗೂ ಆಯ್ಕೆಗೆ ಅರ್ಹರೆಂದು ಕಂಡುಬಂದ 394 ಅಭ್ಯರ್ಥಿಗಳನ್ನು ಆಯ್ಕೆಗೊಳಿಸಿಸುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ತೀರ್ಮಾನ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನ:

ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಿತು.

1. ಪರಿಶೀಲನಾ ಸಮಯದಲ್ಲಿ ಆಯ್ಕೆಗೆ ಅರ್ಹರೆಂದು ಕಂಡುಬಂದ 394 ಹೊರಸಂಪನ್ಮೂಲ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಿತು ಹಾಗೂ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ಸೂಚಿಸಿತು.

2. OMR ಶೀಟ್‌ನಲ್ಲಿ ತಪ್ಪಾಗಿ ಗುರುತು ಮಾಡಿದ ಸುಮಾರು 29 ಪ್ರಕರಣಗಳಿದ್ದು, OMR ನಲ್ಲಿ ತಪ್ಪು-ತಡೆಗಳಿದ್ದಲ್ಲಿ, ಅಂಥವುಗಳನ್ನು ಸರಿಪಡಿಸಿಕೊಳ್ಳಲು, ಈ ಹಿಂದೆ ನೇಮಕಾತಿ ಪ್ರಕ್ರಿಯೆ ನಿರ್ವಹಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕವು ನಿಗಧಿಪಡಿಸಿದ ಸಮಯಾವಕಾಶವನ್ನು ಬಳಸಿಕೊಳ್ಳದಿರುವುದಕ್ಕೆ, ಸಂಬಂಧಪಟ್ಟ ಅಭ್ಯರ್ಥಿಗಳಿಗೆ ನೋಟಿಸ್ ನೀಡಿ, ವಿವರಣೆ ಪಡೆದು ಮುಂದಿನ ಕ್ರಮವಹಿಸಲು ತೀರ್ಮಾನಿಸಿತು.

3. ಇನ್ನೂ ಹಲವಾರು ಅಭ್ಯರ್ಥಿಗಳು, ಆಯಾ ಶೈಕ್ಷಣಿಕ ವರ್ಷದ ಜೂನ್ ಮಾಹೆಯಿಂದ ಮಾರ್ಚ್‌ವರೆಗೆ ಅಥವಾ ಜುಲೈ ಮಾಹೆಯಿಂದ ಮಾರ್ಚ್‌ವರೆಗೆ ಸೇವೆ ಸಲ್ಲಿಸಿದ್ದು, ಈ ಅವಧಿಯನ್ನು ಕೂಡಾ ಪೂರ್ಣ ಶೈಕ್ಷಣಿಕ ವರ್ಷವೆಂದು ಪರಿಗಣಿಸಲು ತೀರ್ಮಾನಿಸಿತು.

4. ಪರಿಶೀಲನಾ ಸಂದರ್ಭದಲ್ಲಿ, ಹಲಾವಾರು ಅಭ್ಯರ್ಥಿಗಳ ಪ್ರಮುಖ ದಾಖಲೆಗಳಾದ ಅಭ್ಯರ್ಥಿಗಳ ಹಾಜರಾತಿ, ಹೊರಸಂಪನ್ಮೂಲ ಏಜೆನ್ಸಿ ನೀಡಿದ ನೇಮಕಾತಿ ಆದೇಶ, ಹೊರಸಂಪನ್ಮೂಲದ ಏಜೆನ್ಸಿರವರು ವೇತನ ಬಟವಾಡೆಗೆ ಸಲ್ಲಿಸುವ ಮಾಹಿತಿ, ಇತ್ಯಾದಿಗಳು ಅನುಮಾನಾಸ್ಪದವಾಗಿರುವುದು ಕಂಡುಬಂದಿದ್ದು, ಅಂಥ 52 ಪ್ರಕರಣಗಳನ್ನು ಗುರುತಿಸಲಾಗಿದ್ದು, ದೆ. ಈ ಪ್ರಕರಣಗಳನ್ನು ಆಯಾ ವಸತಿ ಶಾಲೆಗಳಿಗೆ ಭೇಟಿ ನೀಡಿ, ಸ್ಥಳ ತನಿಖೆ ನಡೆಸಿ, ವಾಸ್ತವಾಂಶದ ವರದಿ ಪಡೆದು ಮುಂದಿನ ಕ್ರಮವಹಿಸಲು ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಲಾದ ಇತರೆ ವಿಷಯಗಳು:

1. ಹಿಂದುಳಿದ ವರ್ಗಗಳ ವಸತಿ ಶಾಲೆಗಳ ನಿರ್ಮಾಣಕ್ಕೆ ಅನುದಾನದ ಕೊರತೆ ಇರುವುದನ್ನು ಆಡಳಿತ ಮಂಡಳಿ ಸಭೆಯು ಚರ್ಚಿಸಿತು. ಆದ್ದರಿಂದ ಕೇಂದ್ರ ಸರ್ಕಾರದ ಹುಡ್ಕೊ ಸಂಸ್ಥೆಯಿಂದ ಸಾಲದ ನೆರವನ್ನು ಪಡೆಯಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿತು.

2. ಮಾನ್ಯ ಅಧ್ಯಕ್ಷರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದವತಿಯಿಂದ 30 ಹೊಸ ಪದವಿ ಪೂರ್ವ ವಸತಿ ಕಾಲೇಜುಗಳನ್ನು ಪ್ರಾರಂಭಿಸಲು ಪ್ರಸ್ತಾಪಿಸಿದರು. ಕಾರ್ಯನಿರ್ವಾಹಕ ನಿರ್ದೇಶಕರು, ಈಗಾಗಲೇ ಮಂಜೂರಾಗಿರುವ 115 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಪದವಿ ಪೂರ್ವ ವಸತಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ಆದೇಶದಲ್ಲಿ ಉಲ್ಲೇಖಿಸಲಾಗಿದ್ದು, ಯಾವುದೇ ವಸತಿ ಶಾಲೆಗಳಲ್ಲಿ ಪದವಿ ಪೂರ್ವ ತರಗತಿಗಳನ್ನು ಪ್ರಾರಂಭಿಸಿರುವುದಿಲ್ಲ. ಅಲ್ಲದೇ, ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಈಗಾಗಲೇ ಪ್ರಾರಂಭವಾಗಿ 2 ತಿಂಗಳು ಕಳೆದಿರುವುದರಿಂದ ಮುಂದಿನ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶೈಕ್ಷಣಿಕ ವರ್ಷದಲ್ಲಿ ಸ್ವಂತ ಕಟ್ಟಡ ಹಾಗೂ ಎಲ್ಲಾ ಮೂಲಭೂತ ಸೌಕರ್ಯ ಹೊಂದಿರುವ 30 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ 30 ಪದವಿ ಪೂರ್ವ ವಸತಿ ಕಾಲೇಜುಗಳನ್ನು ಪ್ರಾರಂಭಿಸಹುದಾಗಿದೆಯೆಂದು ಸಭೆಗೆ ತಿಳಿಸಿದರು. ಆಡಳಿತ ಮಂಡಳಿಯು ತತ್ಸಂಬಂಧವಾಗಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ಮಂಜೂರಾತಿ ಪಡೆಯಲು ತಿರ್ಮಾನಿಸಿತು.

3. ಆಡಳಿತ ಮಂಡಳಿಯು ಈಗಾಗಲೇ ಮಂಜೂರಾಗಿರುವ 26 ಪದವಿ ಪೂರ್ವ ವಸತಿ ಕಾಲೇಜಗಳಲ್ಲಿ ನಿವೇಶನ ಲಭ್ಯವಿಲ್ಲದೇ ಇರುವ ಕಾಲೇಜುಗಳಿಗೆ ಕಾಲೇಜು ಸಂಕೀರ್ಣ ನಿರ್ಮಾಣ ಮಾಡಲು, ಸ್ವಂತ ಕಟ್ಟಡ ಹೊಂದಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಆವರಣದಲ್ಲಿ ಕಾಲೇಜು ಸಂಕೀರ್ಣ ನಿರ್ಮಾಣ ಮಾಡಲು ಸಾಕಷ್ಟು ವಿಸ್ತೀರ್ಣದಲ್ಲಿ ಉಳಿಕೆ ಜಮೀನು ಲಭ್ಯವಿದ್ದಲ್ಲಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ನಿರ್ಮಾಣ ಮಾಡಲು ಕ್ರಮಹಿಸಲು ತೀರ್ಮಾನಿಸಿತು.

4. ಮಾನ್ಯ ಸಂಘದ ಅಧ್ಯಕ್ಷರು, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣದ ಸಮೀಪದ ಚಿತ್ರಹಳ್ಳಿ ಗ್ರಾಮದಲ್ಲಿ ಸುಮಾರು 50 ಎಕರೆ ಸರ್ಕಾರಿ ಜಮೀನು ಲಭ್ಯವಿದ್ದು, ಈ ಜಮೀನಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಈ ಕೆಳಕಂಡ ಶಿಕ್ಷಣ ಸಂಸ್ಥೆಗಳನ್ನು ಒಂದೇ ಸಮುಚ್ಚಯದಲ್ಲಿ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶೈಕ್ಷಣಿಕ (**Academic Block**) ಮತ್ತು ವಸತಿ ನಿಲಯಗಳನ್ನು (**Dormitary Block**) ನಿರ್ಮಾಣ ಮಾಡಬಹುದಾಗಿದೆ ಎಂದು ಪ್ರಸ್ತಾಪಿಸಿದರು.

- ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು
- ಐಟಿಐ ಕಾಲೇಜು
- ಪದವಿ ಪೂರ್ವ ಕಾಲೇಜು
- ಪ್ರಥಮ ದರ್ಜೆ ಕಾಲೇಜು

ಮಾನ್ಯ ಅಧ್ಯಕ್ಷರು, ಪ್ರಸ್ತಾಪಿಸಿದಂತೆ ಜಮೀನು ಮಂಜೂರಾತಿ ಪಡೆದು, ಮೇಲ್ಕಂಡ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ಮಂಜೂರಾತಿ ಪಡೆಯಲು ಕ್ರಮವಹಿಸುವಂತೆ ಆಡಳಿತ ಮಂಡಳಿಯು ತೀರ್ಮಾನಿಸಿತು.

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಹೆಚ್.ಆಂಜನೇಯ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು